ಶ್ರೀ ರಾಮಚಂದ್ರ ಮಿಷನ್®

ECHOES
ಇಂಡಿಯಾ
ವಾರ್ತಾಪತ್ರ

# ಗುರುಗಳ ಸಮಾಚಾರ

## ಹೈದರಾಬಾದ್: ಮಾರ್ಚ್ 6–9

ಆದರಣೀಯ ಕಮಲೇಶ್ ಭಾಯಿಯವರ ಹೈದರಾಬಾದ್ ಕಿರುಪ್ರವಾಸದ ಕೆಲವೇ ಗಂಟೆಗಳ ಮುಂಚೆ ಸ್ಥಳೀಯ ಅಭ್ಯಾಸಿಗಳಿಗೆ ಸನ್ನಿಹಿತವಾಗಿರುವಅವರ ಭೇಟಿಯ ಸುದ್ದಿ ಸಿಕ್ಕಿತು! ಅವರು ನೇರವಾಗಿ ತುಮಕುಂಟ ವಲಯಾಶ್ರಮಕ್ಕೆ ತೆರಳಿದರು, ಸತ್ಸಂಗವನ್ನು ನಡೆಸಿಕೊಟ್ಟ ನಂತರನೀಡಿದ ಭಾಷಣದಲ್ಲಿ ಅವರು, “ನನ್ನ ಮಟ್ಟಿಗೆ ಇದೊಂದು ಮುಖ್ಯವಾದ ಭೇಟಿ, ಏಕೆಂದರೆ ನಮ್ಮ ಪ್ರಿಯ ಗುರುದೇವರ ಮಹಾಸಮಾಧಿಯ ನಂತರದ ಭಾರತದೊಳಗೆ ನನ್ನ ಪ್ರಥಮ ಭೇಟಿಯಲ್ಲಿ ಇದು ಮೊದಲ ಕೇಂದ್ರವಾಗಿದ್ದು ಈ ಸ್ಥಳದ ಸಂದರ್ಶನವು ಸದಾ ನನ್ನ ಸ್ಮರಣೆಯಲ್ಲಿ ಉಳಿಯುವುದು” ಎಂದರು.ಅವರು, ಗುರುವನ್ನು ಭೌತಿಕ ಸ್ತರದಲ್ಲಿ ಭೇಟಿಯಾಗುವುದು ಮುಖ್ಯವಲ್ಲ, ಬದಲಾಗಿ ಹೃದಯದಿಂದ ಹೃದಯಕ್ಕೆ ಸಂಪರ್ಕವನ್ನು ನಿರ್ಮಿಸಿಕೊಳ್ಳುವುದುಮುಖ್ಯ ಎಂಬುದನ್ನು ಒತ್ತಿಹೇಳಿದರು.

ಮಾರ್ಚ್ 7ರಂದು ಕಮಲೇಶ್ ಭಾಯಿಯವರು BHEL ಆಶ್ರಮದ ಧ್ಯಾನಮಂದಿರದ ಪ್ರಾರಂಭೋತ್ಸವವನ್ನು ಮಾಡಿ ಎರಡು ಸತ್ಸಂಗಗಳನ್ನು ನಡೆಸಿಕೊಟ್ಟರು. ಮೂರು ‘ಸೂಚನೆ’ಗಳನ್ನುಪ್ರಾರ್ಥನಾತ್ಮಕವಾಗಿ ಮಾಡಿದಾಗ ಅದರ ಪರಿಣಾಮ ಮತ್ತು ನಿತ್ಯಸಾಧನೆ ಮಾಡುವ ಅಗತ್ಯವನ್ನು ಅವರು ಒತ್ತಿಹೇಳಿದರು. ನಂತರ ಕಮಲೇಶ್ ಭಾಯಿಯವರು ಪ್ರಿಯ ಚಾರೀಜಿಯವರ ಮೆಚ್ಚಿನ ಯೋಜನೆಗಳಲ್ಲೊಂದಾದ ಕಾನ್ಹಾ ಆಶ್ರಮ ಯೋಜನಾ ಪ್ರದೇಶಕ್ಕೆ ಭೇಟಿಕೊಡಲು ನಿಶ್ಚಯಿಸಿದರು.

ಮಾರ್ಚ್ 8ರಂದು ಅವರು ತುಮಕುಂಟದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು.ತನ್ನ ಭಾಷಣದಲ್ಲಿ, ನಾವು ಪ್ರೇಮವನ್ನು ಆಲಿಂಗಿಸಿಕೊಳ್ಳುವ ಮೂಲಕ, ಜಗತ್ತಿನ ದೋಷಗಳಿಂದ ನಮ್ಮ ಹೃದಯಗಳನ್ನು ರಕ್ಷಿಸಿಕೊಳ್ಳಬಹುದು ಎಂದರು. ಅಂದು ಪ್ರಶಿಕ್ಷಕರ ಒಂದು ಸಭೆಯನ್ನು ಏರ್ಪಡಿಸಲಾಗಿತ್ತು. ಅವರು, ಪ್ರಶಿಕ್ಷಕರ ಕಾರ್ಯ ಮತ್ತು ಅವರಿಗೆ ಮುಕ್ತವಿರುವ ಹೊಸ ವಿಧಾನಗಳ ಬಗೆಗಿನ ಅಂಶಗಳನ್ನು ವಿಶದೀಕರಿಸಿದರು. ಸಂಜೆಯ ಸತ್ಸಂಗದ ನಂತರ ಅವರು ಪುನಃ ಕಾನ್ಹಾಕ್ಕೆ ಹಿಂದಿರುಗಿದರು.

ಮಾರ್ಚ್ 9ರಂದು ಕಮಲೇಶ್ ಭಾಯಿಯವರು ಕಾನ್ಹಾದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು ಹಾಗೂ ಯೋಜನೆಯ ನಿರ್ದಿಷ್ಟ ಅಂಶಗಳನ್ನು ಪರಿಶೀಲಿಸಿದರು. ಸಾಯಂಕಾಲ ಅವರು ಚೆನ್ನೈಗೆ ಹಿಂದಿರುಗಿದರು.





## ಮಹಾರಾಷ್ಟ್ರ ಪ್ರವಾಸ

### ಮುಂಬೈ: ಮಾರ್ಚ್ 13–15

ಮಾರ್ಚ್ 13ರ ಶುಕ್ರವಾರ ಕಮಲೇಶ್ ಭಾಯಿಯವರು ಮುಂಬಯಿಗೆ ಆಗಮಿಸಿದರು ಹಾಗೂ ಹೊಸ ಆಶ್ರಮ ನಿವೇಶನವೊಂದನ್ನು ನೋಡಲು **ಬದಲಾಪುರ್**ಗೆ ಮುಂದುವರಿದರು. ಅಲ್ಲಿ ಅವರು ಸತ್ಸಂಗವನ್ನು ನಡೆಸಿ ನಿವೇಶನದ ಅಭಿವೃದ್ಧಿಯ ಕುರಿತು ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಸೂಚನೆಗಳನ್ನು ಕೊಟ್ಟರು. ಪನ್ವೇಲ್ ಆಶ್ರಮಕ್ಕೆ ತೆರಳುವ ಮುನ್ನ ಅವರು ಅಲ್ಲಿ ವೃಕ್ಷದ ಸಸಿಯೊಂದನ್ನು ನೆಟ್ಟರು.

ಮುಂಬೈಯಲ್ಲಿ ಅವರು ಸತ್ಸಂಗಗಳನ್ನು ನಡೆಸಿಕೊಟ್ಟರು, ಪ್ರಶಿಕ್ಷಕರನ್ನು ಭೇಟಿಯಾದರು ಹಾಗೂ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು, ಓರ್ವನು ತನ್ನ ಪ್ರಾಪಂಚಿಕ ಹಾಗೂ ಆಧ್ಯಾತ್ಮಿಕ ಜೀವನಗಳ ನಡುವೆ ಸಮತೋಲನದ ಪ್ರಜ್ಞೆಯನ್ನು ಕಾಯ್ದುಕೊಳ್ಳಬೇಕು. ಸುಲಭವಾಗಿ ಆಧ್ಯಾತ್ಮಿಕ ಪಥವನ್ನು ಅನುಸರಿಸಲು ಅನುವಾಗುವಂತೆ ಆದರ್ಶಪ್ರಾಯವಾಗಿ ಪ್ರಾಪಂಚಿಕ ಜೀವನವನ್ನು ಹೊಂದಿರಬೇಕು ಎಂದು ಇದರರ್ಥ ಎಂದರು.

ಮಾರ್ಚ್ 14ರ ಶನಿವಾರ, ಸತ್ಸಂಗಾನಂತರ ಕಮಲೇಶ್ ಭಾಯಿಯವರು ತನ್ನ ವೈಯಕ್ತಿಕ ಅನುಭವಗಳ ಬಗ್ಗೆ ಮಾತನಾಡುತ್ತ, ವೇದನೆಯು ಎಲ್ಲರಿಗೂ ಸಮಾನವಾಗಿರುವ ಸಮಯದಲ್ಲಿ, ಸಂಕಟವು ಒಂದು ಆಯ್ಕೆಯಾಗಿರಬಲ್ಲುದು, ತಾನೂ ವೇದನೆಯನ್ನು ಅನುಭವಿಸಿದ್ದೆ ಆದರೆ ಎಂದೂ ಸಂಕಟಪಡಲಿಲ್ಲ ಎಂದರು. ರವಿವಾರ ಮುಂಜಾನೆ ಪುಣೆ, ಅಹ್ಮದ್‌ನಗರ್, ಸೂರತ್, ಸೋಲಾಪುರ್, ಚಿಕ್ಲಿ, ಔರಂಗಾಬಾದ್, ನಾಸಿಕ್ ಹಾಗೂ ಬೃಹತ್ ಮುಂಬೈ ಪ್ರದೇಶದ ಕೇಂದ್ರಗಳಿಂದ ಬಂದ ಅಭ್ಯಾಸಿಗಳ ದೊಡ್ಡ ಸಮಾವೇಶವನ್ನು ನೋಡಿ ಅವರಿಗೆ ವಿಶೇಷತಃ ಸಂತೋಷವಾಗಿತ್ತು.

ಮುಂಬೈಯಲ್ಲಿ ಅವರು ಪ್ರಶಿಕ್ಷಕರನ್ನುದ್ದೇಶಿಸಿ ಮಾತನಾಡಿದರು. ಭಾಷಣದ ನಂತರ ಅಲ್ಲಿ ಪ್ರಶ್ನೋತ್ತರ ಕಾರ್ಯಕ್ರಮವಿತ್ತು. ಇದರ ಉದ್ಧೃತ ಅಂಶಗಳು:

- ಬಾಬೂಜಿ ಮಹಾರಾಜರ ಪ್ರಕಾರ, ಪರಮಾತ್ಮದೊಂದಿಗೆ ಲೀನವಾದ ನಂತರವೇ ನಮ್ಮ ನಿಜವಾದ ಪ್ರಯಾಣವು ಪ್ರಾರಂಭವಾಗುತ್ತದೆ, [ಸ್ವಲ್ಪ

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ





ಮಟ್ಟಿಗೆ, ವಿವಾಹಾನಂತರವೇ ಜೀವನವು ನಿಜವಾಗಿ ಪ್ರಾರಂಭವಾಗುವ ಹಾಗೆ.]

- ಧ್ಯಾನದಲ್ಲಿ ವಿಚಾರಗಳೊಂದಿಗೆ ವ್ಯವಹರಿಸುವುದುಹೇಗೆ ಎಂಬುದರ ಬಗೆಗೆ,
- ಧ್ಯಾನಕಾಲದಲ್ಲಿ ವಿಚಾರಗಳು ಸಹಜ, ವಿಚಾರಶೂನ್ಯ ಸ್ಥಿತಿಯನ್ನು ಸಾಧಿಸುವುದು ಆದರ್ಶವಲ್ಲ, ಹೇಗಿದ್ದರೂ, ನಾವು ಈ ಸಮಯವೆಲ್ಲ ದೈವೀ ಪ್ರಕಾಶದ ಈ ವಿಚಾರವನ್ನು ನಮ್ಮೊಡನೆ ಇರಿಸಿಕೊಂಡರೆ, ನಾವು ವಿಚಾರಗಳಿಗೆ ಗಮನಕೊಡದೆ ಧ್ಯಾನಿಸಬಲ್ಲೆವು ಎಂದರು.

ರವಿವಾರದ ಸತ್ಸಂಗದ ನಂತರ ಬೇಗನೆ ಮಧ್ಯಾಹ್ನದೂಟವಾದ ಬಳಿಕ ಅವರು ನಾಸಿಕಕ್ಕೆ ತೆರಳಿದರು.

## ಮಧ್ಯ ಮಹಾರಾಷ್ಟ್ರ: ಮಾರ್ಚ್ 15–19

ಕಮಲೇಶ್ ಭಾಯಿಯವರು ಅಪರಾಹ್ನ ರಸ್ತೆಪ್ರಯಾಣದ ಮೂಲಕ **ನಾಸಿಕ** ತಲುಪಿದರು ಹಾಗೂ ಆ ಕೂಡಲೆ, ಅಲ್ಲಿ ಸೇರಿದ್ದ 300 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಸಾಯಂಕಾಲ, ಆಶ್ರಮ ನಿವೇಶನದಲ್ಲಿ ತಾತ್ಕಾಲಿಕ ಧ್ಯಾನಮಂದಿರದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅವರು ಒಂದು ಗಂಟೆಯ ಕಾಲ ಯುವಜನರೊಂದಿಗಿದ್ದುಹೊಸ ಅಭ್ಯಾಸಿಗಳಿಗೆ ಸಂಬಂಧಿಸಿದ, ದೂರದರ್ಶನ ನೋಡುತ್ತಸಮಯ ವ್ಯರ್ಥಮಾಡುವುದು, ಆಧುನಿಕ ಕೌಟುಂಬಿಕ ಜೀವನ ಹಾಗೂ ನಾವು ನಮ್ಮನ್ನು ಸುಧಾರಿಸಿಕೊಳ್ಳುವುದು ಹೇಗೆ ಎಂಬಿತ್ಯಾದಿ ವಿಷಯಗಳ ಮೇಲಿನ ವಿವಿಧ ಪ್ರಶ್ನೆಗಳಿಗೆ ಉತ್ತರಿಸಿದರು.

ಮಾರ್ಚ್ 16ರಂದು ಸತ್ಸಂಗ ಹಾಗೂ ಉಪಾಹಾರದ ನಂತರ ಅವರು ಔರಂಗಾಬಾದಿಗೆ ಹೊರಟರು, ದಾರಿಯಲ್ಲಿ, ಉಪಕೇಂದ್ರವಾದ **ಇಯೋಲ**ದಲ್ಲಿ ತಡೆದು ಅಲ್ಲೊಂದು ಸತ್ಸಂಗವನ್ನು ನಡೆಸಿಕೊಟ್ಟರು. ಹನ್ನೆರಡು ಹೊಸಬರನ್ನು ಪ್ರವೇಶಗೊಳಿಸಲಾಯಿತು, ಮಧ್ಯಾಹ್ನದೂಟದ ನಂತರ ಅವರು ಮತ್ತೆ ಪ್ರಯಾಣವನ್ನು ಮುಂದುವರಿಸಿ ಸುಮಾರು 3.00 ಗಂಟೆಗೆ **ಲಸೂರ್** ಕೇಂದ್ರಕ್ಕೆ ಬಂದರು. ಧ್ಯಾನಕೇಂದ್ರಕ್ಕೆಂದು ಪ್ರಸ್ತಾವಿಸಲ್ಪಟ್ಟ ಸ್ಥಳದ ಸಮೀಪ ಮರವೊಂದರ ಕೆಳಗೆ ಸುಮಾರು 50 ಮಂದಿ ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಉಪಸ್ಥಿತರಿದ್ದ ಎಲ್ಲರಿಗೂ ಅದೊಂದು ಸ್ಮರಣೀಯ ಕ್ಷಣವಾಗಿತ್ತು.

ಅಂತಿಮವಾಗಿ ಕಮಲೇಶ್ ಭಾಯಿಯವರು 4.00 ಗಂಟೆಗೆ **ಔರಂಗಾಬಾದ್**ಗೆಬಂದರು. ಔರಂಗಾಬಾದ್ ಆಶ್ರಮದಲ್ಲಿ ಸತ್ಸಂಗವನ್ನು ಆರಂಭಿಸುವ ಮೊದಲು ಅವರುಒಂದು ಕಿರು ಭಾಷಣವನ್ನಿತ್ತು ಪ್ರೇಮಪೂರಿತ ಧ್ಯಾನದ ಅಗತ್ಯವನ್ನು ಒತ್ತಿಹೇಳಿದರು.

ತಾರೀಕು 17ರ ಮಂಗಳವಾರ ಕಮಲೇಶ್ ಭಾಯಿಯವರು, 'ಧ್ಯಾನದ ಅನುಭವ ಹೊಂದಿರಿ' ಎಂಬ ವಿಷಯದ ಮೇಲೆ ಭಾಷಣವನ್ನೀಯುವುದಕ್ಕಾಗಿ ಔರಂಗಾಬಾದ್‌ನ ಸರಕಾರಿ ತಾಂತ್ರಿಕ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದರು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕವರ್ಗ ಹಾಗೂ ಆಮಂತ್ರಿತರನ್ನೊಳಗೊಂಡು ಸುಮಾರು 200ಕ್ಕಿಂತಲೂ ಹೆಚ್ಚಿನ ಉನ್ನತಾಕಾಂಕ್ಷಿಗಳು ಉಪಸ್ಥಿತರಿದ್ದರು. ತನ್ನ ಭಾಷಣದಲ್ಲಿ ಅವರು ಜ್ಞಾನವನ್ನು ಪಡೆಯುವುದಕ್ಕಿಂತಲೂ ಅನುಭವದಿಂದ ಕಲಿಯುವುದು ಹೆಚ್ಚು ಮುಖ್ಯವಾದುದು ಎಂಬುದನ್ನು ಒತ್ತಿಹೇಳಿದರು. ಅವರು ಸಹಜಮಾರ್ಗ ಪದ್ಧತಿಯಲ್ಲಿ ಧ್ಯಾನದ ಸ್ವರೂಪ ಹಾಗೂ 'ಪ್ರಾಣಾಹುತಿ'ಯಿಂದ ನೀಡಲಾಗುವ ಗಾಢವಾದ ಬೆಂಬಲವನ್ನು ವಿವರಿಸಿದರು. ಅವರು ವಿಶ್ರಾಮ ತಂತ್ರದ ಪ್ರಾತ್ಯಕ್ಷಿಕೆ ನೀಡಿದರು. ಆನಂತರ ಅವರು ಅನುಭವದಲ್ಲಿ ಆಸಕ್ತರಾದವರಿಗೆ ಒಂದು ಧ್ಯಾನಾವಧಿಯನ್ನು ನಡೆಸಿಕೊಟ್ಟರು. ಬಹುತೇಕ ಎಲ್ಲರೂ ಅದರಲ್ಲಿ ಭಾಗವಹಿಸಲು ಇಷ್ಟಪಟ್ಟರು ಹಾಗೂ ತದನಂತರ 40ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಸಾಧನೆಯನ್ನು ಆರಂಭಿಸುವ ಆಸಕ್ತಿಯನ್ನು ವ್ಯಕ್ತಪಡಿಸಿದರು.

ಇದಾದ ನಂತರ ಕಮಲೇಶ್ ಭಾಯಿಯವರು **ಚಿಖಾಲಿ**ಗೆ ಪ್ರಯಾಣ ಮುಂದುವರಿಸಿದರು ಹಾಗೂ 22 ಹೊಸ ಅಭ್ಯಾಸಿಗಳನ್ನು ಒಳಗೊಂಡಂತೆ ಸುಮಾರು 250 ಮಂದಿಗೆ ಸಾಯಂಕಾಲದ ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ತರುವಾಯ ಅವರು ಸುಮಾರು 35 ನಿಮಿಷಗಳ ಕಾಲ ಹಿಂದಿಯಲ್ಲಿ ಮಾತನಾಡಿದರು. ಆಮೇಲೆ ಅಭ್ಯಾಸಿಗಳೊಂದಿಗೆ ರಾತ್ರಿಯೂಟವನ್ನು ಮಾಡಿದರು ಹಾಗೂ ಖುದ್ದಾಗಿ ಎಲ್ಲರಿಗೂ ಪ್ರಸಾದವನ್ನು ಹಂಚಿದರು.







ಶ್ರೀ ರಾಮಚಂದ್ರ ಮಿಷನ್® ಎಖೋಸ್ ಇಂಡಿಯಾ ವಾರ್ತಾಪತ್ರ







ತಾರೀಕು 18ರಂದು ಮುಂಜಾನೆಯ ಸತ್ಸಂಗದ ನಂತರ ಅವರು **ಜಲ್ನಾಕ್ಕೆ** ಭೇಟಿಯಿತ್ತರು, ಅಲ್ಲಿ ಸತ್ಸಂಗವನ್ನು ನಡೆಸಿಕೊಟ್ಟು ಧ್ಯಾನಕೇಂದ್ರಕ್ಕೆಂದು ಓರ್ವ ಅಭ್ಯಾಸಿಯು ದಾನವಾಗಿತ್ತ ಸ್ಥಳವನ್ನು ಸಂದರ್ಶಿಸಿದರು.

ಔರಂಗಾಬಾದಿಗೆ ಮರಳಿದ ಅವರು ಆಶ್ರಮದಲ್ಲಿ ಸಂಜೆಯ ಸತ್ಸಂಗವನ್ನು ನಡೆಸಿಕೊಟ್ಟರು ಮತ್ತುಹಿಂದಿಯಲ್ಲಿ ಮಾತನಾಡಿ, ಅಭ್ಯಾಸಿಗಳು ಸ್ವತಃ ತಮ್ಮಲ್ಲಿ ಬದಲಾವಣೆಯನ್ನು ತಂದುಕೊಳ್ಳಲು ಅವರನ್ನು ಪ್ರೋತ್ಸಾಹಿಸಿದರು. ತನ್ನ ಮೊಕ್ಕಾಮಿನ ಅವಧಿಯಲ್ಲಿ ಅವರು, ತಾನೂ ಅವರಲ್ಲೊಬ್ಬ ಎಂಬ ಭಾವನೆ ಅಭ್ಯಾಸಿಗಳಲ್ಲಿ ಉಂಟಾಗುವಂತೆ ಮಾಡಿದರು.

ಮಾರ್ಚ್ 19ರಂದು ಅವರು **ಅಹಮದ್‌ನಗರ** ಕೇಂದ್ರಕ್ಕೆ ಪಯಣಿಸಿದರು, ಅಲ್ಲಿ ಓಂ ಗಾರ್ಡನ್ ಮಂಗಲ್ ಕಾರ್ಯಾಲಯದಲ್ಲಿ ಸತ್ಸಂಗ ನಡೆಯಿತು. ಆ ಬಳಿಕ ಕಮಲೇಶ್ ಭಾಯಿಯವರು ಓರ್ವ ಹಿರಿಯ ಅಭ್ಯಾಸಿಯ ಮನೆಗೆ ಭೇಟಿ ನೀಡಿದರು. ಔರಂಗಾಬಾದ್‌ಗೆ ಹಿಂತಿರುಗುವ ಬದಲಾಗಿ ಅವರು ತನ್ನ ಕಾರ್ಯಕ್ರಮವನ್ನು ಬದಲಾಯಿಸಿ ಪುಣೆಗೆ ಹೋಗಲು ನಿರ್ಧರಿಸಿದರು.

## ಪುಣೆ: ಮಾರ್ಚ್ 19–22

ಕಮಲೇಶ್ ಭಾಯಿಯವರು ತನ್ನ ಪುಟ್ಟ ಪರಿವಾರದ ಸಹಿತ ಪುಣೆಗೆ ಸಾಯಂಕಾಲ ಆಗಮಿಸಿದರು ಹಾಗೂ ಓರ್ವ ಅಭ್ಯಾಸಿಯ ನಿವಾಸದಲ್ಲಿ ಸತ್ಸಂಗವನ್ನು ನಡೆಸಿದರು. ತಾರೀಕು 20ರಂದು ಅವರು ಪನ್‌ಶೆಟ್ ಪುನಶ್ಚೇತನ ಕೇಂದ್ರಕ್ಕೆ ತೆರಳಿದರು. ಅವರು ತನ್ನ ಭೇಟಿಯ ಕಾಲಾವಧಿಯ ಮುಂಜಾನೆ ಮತ್ತು ಸಂಜೆಯ ಸತ್ಸಂಗಗಳನ್ನೆಲ್ಲ ಅಲ್ಲಿ ನಡೆಸಿದರು. ಅವರು ಹದಿನೈದು ಹೊಸ ಪ್ರಶಿಕ್ಷಕರನ್ನು ತಯಾರಿಸಿದರು ಹಾಗೂ ಅಭ್ಯಾಸಿಗಳಿಗೆ ಹಲವಾರು ಭಾಷಣಗಳನ್ನಿತ್ತರು. ಅವುಗಳಲ್ಲೊಂದರಲ್ಲಿ ಅವರು, "ಪರಿಸ್ಥಿತಿಗಳನ್ನು ಲೆಕ್ಕಿಸದೆ ಬದುಕಿನಲ್ಲಿ ನಮ್ಮ ಹೃದಯಗಳಿಂದ ಪ್ರೇಮವು ಹರಿಯುತ್ತಲೇ ಇರಬೇಕು. ಅದು ನಿಂತ ನೀರಾಗಿರದೆ ಹರಿಯುವ ನದಿ ಯಂತಿರಬೇಕು" ಎಂದರು. ಇನ್ನೊಂದು ಸಭೆಯಲ್ಲಿ ಅವರು,"ಹೃದಯವು ನಿಮ್ಮೊಂದಿಗೆ ಯಾವಾಗಲೂ ಸತ್ಯವನ್ನು ನುಡಿಯುತ್ತದೆ ಹಾಗೂ ಸರಿಯಾಗಿ ಮಾರ್ಗದರ್ಶನವನ್ನೀಯುತ್ತದೆ. ದುರಾಸೆ ಹಾಗೂ ಅಹಂಕಾರಗಳು ನಡುವೆ ಪ್ರವೇಶಿಸಿ ದಾರಿತಪ್ಪಿಸುತ್ತವೆ. ಹೃದಯವನ್ನು ಅನುಸರಿಸಲು ಧೈರ್ಯ ಬೇಕಾಗುತ್ತದೆ. ಯಾವಾಗಲೂ ನಿಮ್ಮ ಹೃದಯವನ್ನು ಅನುಸರಿಸಿರಿ." ಎಂದರು.

ಕುಟೀರದಲ್ಲಿ ಅವರ ಸಮಯವು, ಹೊಸ ಅಭ್ಯಾಸಿಗಳ ಭೇಟಿ, ಇರುವ ಅಭ್ಯಾಸಿಗಳೊಂದಿಗೆ ಮಾತುಕತೆ–ನಗು ಹಾಗೂ ತನ್ನ ಅವಿರತ ಕಾರ್ಯ ಇವುಗಳಲ್ಲಿ ಕಳೆದಿತ್ತು.ಪ್ರತಿ ಸಾಯಂಕಾಲ ಅವರು ಖಡಕ್‌ವಾಸ್ಲಾ ಅಣೆಕಟ್ಟಿನ ದಂಡೆಗೆ ಒಂದು ಚೇತೋಹಾರಿ ನಡಿಗೆಯನ್ನು ಆನಂದಿಸುತ್ತಿದ್ದರು, ಅಲ್ಲಿ ಸ್ವಲ್ಪ ಸಮಯ ಮೌನವಾಗಿ ಕುಳಿತುಕೊಳ್ಳುತ್ತಿದ್ದರು, ನಂತರ ಅಭ್ಯಾಸಿಗಳು ಹಾಗೂ ಮಕ್ಕಳೊಂದಿಗೆ ಮಾತನಾಡುತ್ತ ತನ್ನ ಮುಕ್ತಮನ ಹಾಗೂ ಪ್ರತಿಯೊಬ್ಬರ ಸಲುವಾಗಿರುವ ಪ್ರೇಮದಿಂದ ಅವರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು.

## ಕರಾವಳಿ ಆಂಧ್ರ ಪ್ರವಾಸ

### ಎಪ್ರಿಲ್ 2–12

ಆದರಣೀಯ ಕಮಲೇಶ್ ಭಾಯಿಯವರು ತಾರೀಕು 2ರಂದು ಮುಂಜಾನೆ 6.30ರ ಸುಮಾರಿಗೆ ಸಿದ್ಧರಾಗಿ ಧ್ಯಾನದಲ್ಲಿ ಕುಳಿತರು. ಅವರು ಆಂಧ್ರ ಕರಾವಳಿಯುದ್ದಕ್ಕೂ ಇರುವ ಅನೇಕ ಕೇಂದ್ರಗಳನ್ನು ಸಂದರ್ಶಿಸುವ ಈ ಹೊಸ ಪ್ರವಾಸಕ್ಕಾಗಿ ಗುರುಗಳಿಗೆ ಪ್ರಾರ್ಥನೆ ಸಲ್ಲಿಸಿದರು. ಚಾರೀಜಿಯವರು ಇವೆಲ್ಲ ಕೇಂದ್ರಗಳನ್ನು ಮತ್ತೊಮ್ಮೆ ಸಂದರ್ಶಿಸ ಬಯಸಿದ್ದರು ಆದರೆ ಅನೇಕ ಕಾರಣಗಳಿಂದಾಗಿ ಅದು ನೆರವೇರಲಿಲ್ಲ ಎಂಬುದನ್ನು ಅವರು ಹೇಳಿದರು.

ಅವರು **ಸುಲ್ಲೂರುಪೇಟೆ**ಯನ್ನು ಪೂರ್ವಾಹ್ನ ಸುಮಾರು 9.00 ಗಂಟೆಗೆ ತಲುಪಿದರು ಹಾಗೂ ಅಲ್ಲಿ ಸೇರಿದ್ದ 120 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಒಂದು ಪುಟ್ಟ ಭಾಷಣದ ತರುವಾಯ, ಅವರು **ನೆಲ್ಲೂರಿ**ಗೆ ಮುಂದುವರಿದರು. ಮರುದಿನ ಅವರು ನೆಲ್ಲೂರು ನಗರದಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ **ಮನವರಪ್ಪಾಡು**ವಿನಲ್ಲಿಹೊಸ ಸುಲೋಚನಾಸದನ ಆಶ್ರಮದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಭಾಷಣವೊಂದರಲ್ಲಿ ಅವರು, ಸಂಸ್ಕಾರ ಹಾಗೂ ಅಹಂಕಾರ ಇವು ಬೇರೆ ಬೇರೆ ಇರುವುಗಳು ಎಂಬುದನ್ನು ವಿವರಿಸಿದರು."ಅಹಂಕಾರಕ್ಕೆ ಸಂಸ್ಕಾರಗಳೊಂದಿಗೆ ಸಂಬಂಧವಿಲ್ಲ. ನಾವು,'ನಾನು ಇದನ್ನು ಮಾಡುವುದಿಲ್ಲ' ಅಥವಾ 'ನಾನು ನನ್ನ ಪತಿ/ಪತ್ನಿಯನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ'ಎಂದು ಹಟ ಮಾಡುವಾಗ, ಅದು ಮೊಂಡುತನ. ಇದು ಪ್ರಕ್ಷುಬ್ಧತೆ ಮತ್ತು ಅಸ್ತವ್ಯಸ್ತತೆಯನ್ನು ಹಾಗೂ ಹೆಚ್ಚು ಸಂಸ್ಕಾರಗಳನ್ನು ಉಂಟು ಮಾಡುತ್ತದೆ. ಅಹಂಕಾರವು ಸಂಸ್ಕಾರಗಳ ಫಲವಲ್ಲ, ಬದಲಾಗಿ ಅಹಂಕಾರವು ಹೆಚ್ಚು ಸಂಸ್ಕಾರಗಳನ್ನು ಉಂಟುಮಾಡುತ್ತದೆ"ಎಂದರು.



ಶ್ರೀ ರಾಮಚಂದ್ರ ಮಿಷನ್® ಎಖೋಸ್ ಇಂಡಿಯಾ ವಾರ್ತಾಪತ್ರ



ತನ್ನ ಪ್ರವಾಸವನ್ನು ಮುಂದುವರಿಸುತ್ತ ಅವರು **ಕಾವಲಿ**ಯಲ್ಲಿನ ಆಶ್ರಮಕ್ಕೆ ಭೇಟಿಯಿತ್ತರು ಹಾಗೂ ನಂತರ ಎಪ್ರಿಲ್ 4ರಿಂದ 6ರ ವರೆಗೆ **ಓಂಗೋಲ್**ನಲ್ಲಿ ಸಮಯ ವಿನಿಯೋಗಿಸಿದರು.

ಈ ಸ್ಥಳಗಳಲ್ಲಿ, ಸತ್ಸಂಗಗಳನ್ನು ನಡೆಸಿ, ಅಭ್ಯಾಸಿಗಳು ಮತ್ತು ಮಕ್ಕಳೊಡನೆ ಸಮಯವನ್ನು ವಿನಿಯೋಗಿಸುತ್ತಿದ್ದ ತಮ್ಮ ಗುರುಗಳೊಡನೆ ಕಾಲಕಳೆಯಲು ಸ್ಥಳೀಯ ಅಭ್ಯಾಸಿಗಳು ಹಾಗು ಸಮೀಪದ ಕೇಂದ್ರದವರು, ಹೆಚ್ಚಿನ ಸಂಖ್ಯೆಯಲ್ಲಿ ಒಟ್ಟುಗೂಡಿದ್ದರು. 6 ರಂದು, ಚಿಲ್‌ಕಲೂರಿಪೇಟೆಗೆ ಹೋಗುವ ದಾರಿಯಲ್ಲಿ, ಅವರು **ಯನಮಡ್ಲ** ಎಂಬ ಒಂದು ಸಣ್ಣ ಹಳ್ಳಿಗೆ ಭೇಟಿ ಕೊಟ್ಟು ಸಹಜ ಮಾರ್ಗದ ಬಗ್ಗೆ ಹೆಚ್ಚಾಗಿ ಅರಿತುಕೊಳ್ಳ ಬಯಸಿದ 250 ಸ್ಥಳೀಯರನ್ನು ಉದ್ದೇಶಿಸಿ ಭಾಷಣ ಮಾಡಿ, ಜೀವನದ ಗುರಿ ಮತ್ತು ಧ್ಯಾನದ ಅವಶ್ಯಕತೆಯ ಬಗ್ಗೆ ಸಂದೇಶವೊಂದನ್ನು ನೀಡಿದರು.

ಅದಾದನಂತರ, ಕಮಲೇಶ್ ಭಾಯಿಯವರು **ಚಿಲ್‌ಕಲೂರಿಪೇಟೆಗೆ** ಹೊರಟರು. ಸತ್ಸಂಗ ಮುಗಿದ ಮೇಲೆ, ಅವರು ಆಶ್ರಮವನ್ನು ಹರಸಿದರು ಮತ್ತು ಸಂಕ್ಷಿಪ್ತ ಸಂದೇಶವೊಂದನ್ನು ಕೊಟ್ಟು, ಮರಗಳನ್ನು ನೆಡುವಂತೆ ಸ್ಥಳೀಯ ತಂಡಕ್ಕೆ, ಸಲಹೆ ನೀಡಿದರು. “ಲಾಲಾಜಿಯವರು, ಎಲ್ಲಾ ಆಶ್ರಮಗಳು ಕಾಕಭೂಷಂಡಿಯವರ ಆಶ್ರಮದಂತೆ ಹಸಿರಾಗಿ ಮತ್ತು ಶಾಂತಿಯುತವಾಗಿ ಇರಬೇಕೆಂದು ಬಯಸುತ್ತಿದ್ದರು: ಮರಗಳು ಪ್ರಾಣಾಹುತಿಯನ್ನು ಉಳಿಸಿಕೊಳ್ಳುತ್ತವೆ, ಆದರೆ ಮಾನವರು ಉಳಿಸಿಕೊಳ್ಳಬಹುದು ಅಥವಾ ಕಳೆದುಕೊಳ್ಳಬಹುದು. ಆದ್ದರಿಂದ, ಹೆಚ್ಚು ಮರಗಳ ಬೆಳವಣಿಗೆಯು ಆಶ್ರಮದ ಶಕ್ತಿಯನ್ನು ಉಳಿಸಿಕೊಳ್ಳುತ್ತದೆ” ಎಂದು ಹೇಳಿದರು.

ಮಧ್ಯಾಹ್ನದ ವೇಳೆಗೆ ಅವರು **ಕೋಲ್‌ಕಲೂರು** ಆಶ್ರಮವನ್ನು ತಲುಪಿ, ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಕರಾವಳಿ ಆಂಧ್ರಪ್ರದೇಶದ ಸಭೆಗಳ ಸೊಗಸಾದ ವಾತಾವರಣದ ಅನುಭವ ಇಲ್ಲಿಯೂ ಮುಂದುವರೆಯಿತು. ಮಧ್ಯಾಹ್ನ ವಿರಮಿಸುತ್ತಿದ್ದಾಗ, ಗುರುಪರಂಪರೆಯು ಈ ಯಾತ್ರೆಯನ್ನು ಗಮನಿಸುತ್ತಿದೆ ಮತ್ತು ಅವರು ಇಡೀ ವಿಶ್ವದ ಮೇಲೆ ವಿಶೇಷ ಕಾರ್ಯ ಮಾಡುತ್ತಿದ್ದಾರೆ. ಆಧ್ಯಾತ್ಮಿಕ ವಿಕಸನವು ಮಾನವ ಜನಾಂಗದ ಒಳಿತಿಗೆ ಮತ್ತು ಉಳಿವಿಗೆ ಅವಶ್ಯಕ, ಎಂದು ಹೇಳಿದರು.

ಏಪ್ರಿಲ್ 7ರಂದು, ಕಮಲೇಶ್ ಭಾಯಿ ಅವರು ಬೆಳಿಗ್ಗೆ 8.30ಕ್ಕೆ **ಗುಂಟೂರು** ಆಶ್ರಮಕ್ಕೆ ಆಗಮಿಸಿದರು. ಅವರನ್ನು ಸ್ವಾಗತಿಸಲು ಅಲ್ಲಿ ಸುಮಾರು 400 ಅಭ್ಯಾಸಿಗಳುಇದ್ದರು. ಸತ್ಸಂಗದ ನಂತರ, ಅವರು ಆವರಣವನ್ನು ಸಂದರ್ಶಿಸಿದರು ಮತ್ತು ಎಲ್ಲವನ್ನು ಉತ್ಸುಕತೆಯಿಂದ ಗಮನಿಸಿದರು. ತಮ್ಮ ಭೇಟಿಯ ನೆನಪಿನ ಸಂಕೇತವಾಗಿ, ಅವರು ಮೂರು ಮಾವಿನ ಸಸಿಗಳನ್ನು ನೆಟ್ಟರು. ಬೆಳಿಗ್ಗೆ 10.30ಕ್ಕೆ ಅವರು ವಿಜಯವಾಡಕ್ಕೆ ಹೊರಟರು.

ಕಮಲೇಶ್ ಭಾಯಿಯವರು ವಿಜಯವಾಡಕ್ಕೆ ಹೋಗುವ ಮಾರ್ಗದಲ್ಲಿ, ಕೆ ಎಲ್ ವಿಶ್ವವಿದ್ಯಾಲಯದಲ್ಲಿ, ವಿಜಯವಾಡದ ತಂಡದವರು ಆಯೋಜಿಸಿದ್ದ ಮುಕ್ತ ಸಭೆಗಾಗಿತಂಗಿದರು. ಜೀವನದಲ್ಲಿ ಧ್ಯಾನದ ಅವಶ್ಯಕತೆಯ ಸಂಕ್ಷಿಪ್ತ ಪರಿಚಯವನ್ನು, ಸುಮಾರು 300 ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವರ್ಗದವರು ಉತ್ಸಾಹದಿಂದ ಆಲಿಸಿದರು. ಅವರ ಸ್ಫೂರ್ತಿದಾಯಕ ಮಾತುಗಳ ನಂತರ, ರಿಲ್ಯಾಕ್ಸೇಷನ್ ಅನ್ನು ನಡೆಸಿದರು ಮತ್ತು ಭಾಗವಹಿಸಿದವರು ತಕ್ಷಣವೇ ಆಳವಾದ ಸ್ಥಿತಿಯಲ್ಲಿ ಮುಳುಗಿಹೋದರು. ನಂತರ ಅವರು ವಿದ್ಯಾರ್ಥಿಗಳೆಲ್ಲರಿಗೂ ಪ್ರಾರಂಭಿಕ ಬೈಠಕ್ಕನ್ನು ಕೊಟ್ಟರು.

**ವಿಜಯವಾಡ** ಆಶ್ರಮದಲ್ಲಿ, ಸುಮಾರು 40 ಚಿಣ್ಣರು, ಹೃದಯದಿಂದ ಧಾರೆಯಾಗಿ ಹರಿಯುತ್ತಿರುವ ಪ್ರೇಮವನ್ನು ವ್ಯಕ್ತಪಡಿಸುವ ಗೀತೆಯೊಡನೆ, ಹೃತ್ಪೂರ್ವಕವಾಗಿ ಅವರನ್ನು ಸ್ವಾಗತಿಸಿದರು. ಸತ್ಸಂಗದ ನಂತರ, ಅವರು ಆಶ್ರಮದ ಪಕ್ಕದಲ್ಲಿರುವ ಎಸ್ ಎಮ್ ಎಸ್ ಎಫ್ ಕಟ್ಟಡಕ್ಕೆ ಭೇಟಿ ನೀಡಿದರು. ಅವರು ಸ್ಪಷ್ಟವಾದ ತಿಳುವಳಿಕೆ ನೀಡಿ, ನಗರದ ಪ್ರಮುಖ ಸ್ಥಳದಲ್ಲಿದ್ದು, ಅತ್ಯಮೂಲ್ಯವಾದ ನಿವೇಶನದ ಅತ್ಯುತ್ತಮ ಉಪಯೋಗ ಪಡೆದುಕೊಳ್ಳಬೇಕೆಂದು ಕೇಂದ್ರದ ಮುಖ್ಯಸ್ಥರಿಗೆ ಸಲಹೆ ನೀಡಿದರು. ಆಶ್ರಮವನ್ನು ಮೊದಲ ದರ್ಜೆಯ ಪ್ರತಿಕೃತಿಯನ್ನಾಗಿ ಮಾಡುವುದಕ್ಕಾಗಿ ಎರಡು ಭವ್ಯವಾದ ಗೋಪುರಗಳನ್ನು ಕಟ್ಟುವ ವಿಚಾರವನ್ನು ಪ್ರಸ್ತಾಪಿಸಿದರು. ಆ ಸಂಜೆ ಅವರ ಕುಟೀರದಲ್ಲಿ ನಡೆದ ಒಂದು ಚರ್ಚೆಯಲ್ಲಿ ಅವರು, ಬಯಕೆಗಳು ಮತ್ತು ಇಚ್ಛೆಗಳ ನಡುವಿನ ವ್ಯತ್ಯಾಸದ ಮೇಲೆ ಒಳನೋಟ ಬೀರಿದರು ಮತ್ತು ಸಹಜ ಮಾರ್ಗದ ಪ್ರಾರ್ಥನೆಯು 'ಇಚ್ಛೆ'ಗಳಪ್ರಸ್ತಾಪವನ್ನು ಏಕೆಮಾಡುತ್ತದೆ ಎಂಬುದರ ಬಗ್ಗೆ ನಮಗೆ ಚಿಂತನೆ ಮಾಡಲು ಹೇಳಿದರು.

8ನೇ ತಾರೀಖು ಬೆಳಿಗ್ಗೆ ಅವರು ಮತ್ತೊಂದು ಸತ್ಸಂಗವನ್ನು ನಡೆಸಿಕೊಟ್ಟು, ಅದಾದ ನಂತರ ಸಂಕ್ಷಿಪ್ತ ಭಾಷಣ ಮಾಡಿ, ಹೊಸ ಅಭ್ಯಾಸಿಗಳನ್ನು ತೆರೆದ ಹೃದಯದಿಂದ ಸ್ವಾಗತಿಸಬೇಕು ಮತ್ತು ಅವರು ಸಹಜ ಮಾರ್ಗದ ಅನುಭವ







ಪಡೆಯಲು ಅನುಕೂಲಕರವಾದ ವಾತಾವರಣವನ್ನು ನಾವು ಸೃಷ್ಟಿ ಮಾಡಬೇಕು ಎಂದು ಅಲ್ಲಿ ನೆರೆದಿದ್ದವರಿಗೆ ಹೇಳಿದರು.

ಅವರು ಏಲೂರು ಮಾರ್ಗವಾಗಿ **ರಾಜಮುಂಡ್ರಿ** ಆಶ್ರಮಕ್ಕೆ ಪ್ರಯಾಣ ಮುಂದುವರೆಸಿ, ವೃಕ್ಷಗಳನ್ನು ಸಂರಕ್ಷಿಸುವ ಹಾಗು ಅವುಗಳನ್ನು ಆಶ್ರಮಗಳಲ್ಲಿ ನೆಡುವುದರ ಪ್ರಾಮುಖ್ಯತೆಯನ್ನು ಅಲ್ಲಿ ಮತ್ತೊಮ್ಮೆ ಪ್ರಸ್ತಾಪಿಸಿದರು.

9ರಂದು, ಅವರು **ಕಾಕಿನಾಡ** ಆಶ್ರಮವನ್ನು ಸಾಯಂಕಾಲ ತಲುಪುವ ಮೊದಲು, **ಅಮಲಾಪುರಂ** ಮತ್ತು **ಯಾಣಂ** ಕೇಂದ್ರಗಳಿಗೆ ಭೇಟಿಯಿತ್ತರು. ಸತ್ಸಂಗದ ನಂತರದ ಭಾಷಣದಲ್ಲಿ ಅವರು, ಜೀವನಾಧಾರವಾಗುವಂತಹ ಮತ್ತು ಸುಸಂಬದ್ಧವಾದ ಅಭ್ಯಾಸದ ಅವಶ್ಯಕತೆಗೆ ಒತ್ತು ನೀಡಿದರು. "ಸಣ್ಣಪರಿಶ್ರಮಗಳು ದೊಡ್ಡ ಪರಿಣಾಮ ಬೀರುತ್ತವೆ. ಸಣ್ಣ ಪರಿಶ್ರಮಗಳು ಮೊದಲಿಗೆ ಹೆಚ್ಚೆಂದು ಅನಿಸದೆ ಇರಬಹುದು. ಆದರೆ, ನಮ್ಮ ಹೃದಯದಲ್ಲಿ ಸೃಷ್ಟಿಯಾಗುವ ಪ್ರತಿಯೊಂದು ಸಣ್ಣ ಸ್ಥಿತಿಯೂ, ಮೇಲಿಂದ ಬೀಳುವ ನೀರಿನ ಹನಿಗಳಂತೆ ಒಟ್ಟುಗೂಡುತ್ತವೆ. ಪ್ರತಿಯೊಂದು ಸ್ಥಿತಿಯೂ ಅದೇ ರೀತಿಯಾದ್ದರಿಂದ ನಾವು ನೀರಿನ ಹನಿಗಳು ಆವಿಯಾಗಿ ಹೋಗುವಂತೆ ಅವುಗಳನ್ನು ಆಗಲು ಬಿಡಬಾರದು, ಅವುಗಳನ್ನು ನಮ್ಮ ಹೃದಯದೊಳಗೆ ಶೇಖರಿಸಬೇಕು ಮತ್ತು ಒಂದು ಸಾಗರವನ್ನಾಗಿಸಬೇಕು. ಯಾವಾಗ ಈ ನನ್ನ ಸಾಗರವು ಗುರುಗಳ ಸಾಗರದಲ್ಲಿ ಲೀನವಾಗುವುದೋ, ಆಗ ಅಲ್ಲಿ ಸೌಂದರ್ಯವಿರುತ್ತದೆ, ಉಜ್ವಲವಾದ ಸೌಂದರ್ಯ."

ಕಮಲೇಶ್ ಭಾಯಿ ಅವರು 10 ರಂದು ಮಧ್ಯಾಹ್ನ ಹೊರಟು, ವಿಶಾಖಪಟ್ಟಣದಿಂದ ಸುಮಾರು 40 ಕಿ ಮೀ ದೂರದಲ್ಲಿರುವ **ಸಂಪತಿಪುರಂನ** ಆಶ್ರಮವನ್ನು ತಲುಪಿದರು. ಸಂಜೆಯ ಸಮಯದಲ್ಲಿ, ಅಭ್ಯಾಸಿಗಳೊಡನೆ ಹೊರಭಾಗದಲ್ಲಿ ಕುಳಿತು, ಹೈದರಾಬಾದಿನ ಯೋಜನೆಯ ಬಗ್ಗೆ ಮಾತನಾಡುತ್ತಾ, ಅದು ಸಹಜ ಮಾರ್ಗದ ಮೆಕ್ಕಾ ಆಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಚರ್ಚೆಯು ವಿಜ್ಞಾನ ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಮುಂದುವರೆಯಿತು. ರಾತ್ರಿ ಭೋಜನಾನಂತರ, ಅವರು ಸ್ಥಳೀಯರ ಗುಂಪಿನೊಡನೆ ಕುಳಿತು, ಭವಿಷ್ಯದ ಪ್ರಗತಿಯ ಸಾಧ್ಯತೆಯ ಬಗ್ಗೆ ಚರ್ಚೆ ಮತ್ತು ಆಧ್ಯಾತ್ಮಿಕತೆಯನ್ನು ಕುರಿತು ಪ್ರಶ್ನೆಗಳಿಗೆ ಉತ್ತರ ನೀಡುವುದರಲ್ಲಿ ಬಹಳಷ್ಟು ಸಮಯವನ್ನು ಕಳೆದರು. ಮರುದಿನ, ಆಲಸ್ಯದ ಕುರಿತು ಪ್ರಶ್ನೆಯೊಂದನ್ನು ಉತ್ತರಿಸುತ್ತಾ "ನಮ್ಮ ನಿಷ್ಕ್ರಿಯತೆಯೂ ಕೂಡ ಸಂಸ್ಕಾರಗಳನ್ನುಂಟುಮಾಡುತ್ತದೆ. ಕೆಲವು ಕಾರ್ಯಗಳನ್ನು ಮಾಡುವಲ್ಲಿ ನಮ್ಮ ಅಸಾಮರ್ಥ್ಯ ಮತ್ತು ಅದರ ಬಗ್ಗೆ ನಾವು ಚಿಂತಿಸುತ್ತಾ ಕೊರಗಿದರೆ, ಅವು ಸಹ ಸಂಸ್ಕಾರಗಳನ್ನು ರೂಪಿಸುತ್ತವೆ" ಎಂದರು.

12ರ ಬೆಳಗಿನ 7.30ಯ ಸತ್ಸಂಗದ ನಂತರ ಅವರು ತಮ್ಮ ಪ್ರವಾಸದ ಸಮಾರೋಪ ಭಾಷಣ ಮಾಡಿ, ಮತ್ತಷ್ಟು ಉತ್ತಮರಾಗಲು ನಿಷ್ಠಾಪೂರ್ಣ ಸಾಧನೆಯಿಂದ ಪರಿವರ್ತನೆ ಹೊಂದಬೇಕು ಮತ್ತು ನಮ್ಮ ಸ್ವಪರಿವರ್ತನೆಯಿಂದ, ಹೊಸ ಅನ್ವೇಷಕರನ್ನು ಆಕರ್ಷಿಸಬೇಕೆಂದು ಪ್ರತಿಯೊಬ್ಬರನ್ನೂ ಪ್ರೋತ್ಸಾಹಿಸಿದರು. ನಂತರ ಪ್ರಶಿಕ್ಷಕರೊಡನೆ ಅನೌಪಚಾರಿಕ ಮಾತುಕತೆಯಲ್ಲಿ ತೊಡಗಿ, ಪ್ರತಿಯೊಬ್ಬರೂ ಮಿಷನ್ನಿನ ವಿಸ್ತರಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ನುಡಿದರು. ಮಧ್ಯಾಹ್ನ, ಸ್ವಯಂಸೇವಕರೊಂದಿಗೆ ಭೋಜನ ಮಾಡಿ, ಒಂದು ಘಂಟೆಗಳಕಾಲ ಅವರೊಡನೆ ಮಾತನಾಡಿದರು.

ಪ್ರವಾಸವನ್ನು ಮುಕ್ತಾಯಗೊಳಿಸುತ್ತ ಅವರು ಸಭೆಗಳು, ಶಿಸ್ತು, ಅಭ್ಯಾಸಿಗಳ ಮನೋಧರ್ಮ, ಆಧ್ಯಾತ್ಮಿಕ ಸಭೆಗಳಲ್ಲಿ ಸಹಭಾಗಿತ್ವ, ಇವುಗಳಿಂದ ಸಂತುಷ್ಟನೂ ಹಾಗು ಪ್ರಭಾವಿತನೂ ಆಗಿದ್ದೇನೆಂದು ಹೇಳಿದರು. ಅವರು ರೈಲು ಮುಖಾಂತರ ಹೈದರಾಬಾದಿಗೆ ಹೊರಟರು.

## ಹೈದರಾಬಾದ್ ಏಪ್ರಿಲ್ 13

ಕಮಲೇಶ್ ಭಾಯಿ ಅವರು ಬೆಳಿಗ್ಗೆ ಸುಮಾರು 10 ಘಂಟೆಗೆ ಹೈದರಾಬಾದ್ ತಲುಪಿ, ದೊಮ್ಮಲಗುಡ ಯೋಗಾಶ್ರಮದಲ್ಲಿ ಅವರಿಗಾಗಿ ಕಾಯುತ್ತಿದ್ದ ಸುಮಾರು 2000 ಅಭ್ಯಾಸಿಗಳನ್ನು ಭೇಟಿಯಾಗಲು ಹೋದರು. ಸತ್ಸಂಗದ ನಂತರ, 31 ಮಾರ್ಚ 2015ರ ದಿವ್ಯ ಲೋಕದ ಪಿಸುಮಾತುಗಳಲ್ಲಿ, ಬಾಬೂಜಿ ಮಹಾರಾಜರು ಕಾನ್ಹಾ ಶಾಂತಿವನ ಯೋಜನೆಯು ಒಂದು 'ಆಧ್ಯಾತ್ಮಿಕ ಆಶ್ರಯಧಾಮ'ವಾಗುವುದೆಂದು ಹೇಳಿದ ಮಾತುಗಳನ್ನು ಉಲ್ಲೇಖಿಸಿ, ಲಘು ಭಾಷಣ ಮಾಡಿದರು. ಅಭ್ಯಾಸಿಗಳು ಇದರಲ್ಲಿ ಸಾಧ್ಯವಾದಷ್ಟೂ ಹೆಚ್ಚಾಗಿ ತೊಡಗಿಸಿಕೊಂಡು, ಇದನ್ನು 50000ಕ್ಕೂ ಹೆಚ್ಚು ಮರಗಳುಳ್ಳ ಒಂದು ನಿಜವಾದ ವನವನ್ನಾಗಿಸಬೇಕೆಂದು ಆಗ್ರಹಪೂರ್ವಕವಾಗಿ ಮನವಿ ಮಾಡಿದರು.

ಈ ಯೋಜನೆಗೆ ಕನಿಷ್ಠ 2000 ಸ್ವಯಂಸೇವಕರ ಅವಶ್ಯಕತೆ ಇದೆ ಎಂದು ಕೂಡ ಹೇಳಿದರು. ಕಾನ್ಹಾದಲ್ಲಿ ಕೆಲವು ಘಂಟೆಗಳನ್ನು ಕಳೆದ ನಂತರ ಸಾಯಂಕಾಲ ಅವರು ದೆಹಲಿಗೆ ಹೊರಟರು.

## ಉತ್ತರ ಭಾರತದ ಯಾತ್ರೆ

14ರಂದು ಕಮಲೇಶ್ ಭಾಯಿ ಅವರು ಗುರ್‌ಗಾಂವ್ ಆಶ್ರಮದಲ್ಲಿ ಸತ್ಸಂಗಗಳನ್ನು ನಡೆಸಿಕೊಟ್ಟರು ಮತ್ತು ಸಂಜೆಯ ಧ್ಯಾನದ ನಂತರ ಲಘು ಭಾಷಣ ಮಾಡಿದರು.

15ರಂದು ಮುಂಜಾನೆ ದೆಹಲಿಯನ್ನು ಬಿಟ್ಟು **ಲಕ್ನೋದ** ಅಮೌಸಿ ವಿಮಾನನಿಲ್ದಾಣದಲ್ಲಿ ಇಳಿದು ನೇರವಾಗಿ ಆಶ್ರಮಕ್ಕೆ ಹೋದರು. ಉಪಹಾರ ಮತ್ತು ಲಘು ವಿಶ್ರಾಮದ ನಂತರ, ಬಾಬೂಜಿ ಮಹಾರಾಜರ ಜನ್ಮ ದಿನೋತ್ಸವದ ಆಚರಣೆಯ ಸ್ಥಳದ ನಕ್ಷೆಯನ್ನು ಪರಿಶೀಲಿಸಿದರು ಮತ್ತು ಸುಧಾರಣೆಗೆ ಸಲಹೆಗಳನ್ನು ನೀಡಿದರು. ನಂತರ ಅವರು ಸಮಾರಂಭದ ಸಮಗ್ರ ಸ್ಥಳವನ್ನು ಕಾರಿನಲ್ಲಿ ಸುತ್ತು ಹಾಕಿದರು. ಬಳಿಕ ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟು, ಲಘು ಭಾಷಣವನ್ನು ಮಾಡಿದರು.

16ರಂದು, ಅವರು **ಷಹಜಹಾನ್‌ಪುರಕ್ಕೆ** ಹೊರಟು, 9 ಘಂಟೆಗೆ ಸ್ಥಳ ತಲುಪಿದರು. ಪ್ರೇಮಭರಿತ ಹಾಗು ಉತ್ಸಾಹಿ ಅಭ್ಯಾಸಿಗಳು ಕೆಲವರು, ಅವರನ್ನು ಸ್ವಾಗತಿಸಲು ಹಾರಗಳು ಮತ್ತು ಪ್ರೀತಿತುಂಬಿದ ಹೃದಯಗಳೊಡನೆ ರಸ್ತೆ ಬದಿಯಲ್ಲಿ ಕಾದಿದ್ದರು. ಆಶ್ರಮ ತಲುಪಿದ ನಂತರ, ಅವರು ಬಾಬೂಜಿ ಮಹಾರಾಜರ ಮಹಾಸಮಾಧಿಯ ಮಂಟಪಕ್ಕೆ ಹೋಗಿ ಪುಷ್ಪಗಳನ್ನು ಅರ್ಪಿಸಿದರು. ಐದು ನಿಮಿಷಗಳ ಅಲ್ಪಾವಧಿಯ ಧ್ಯಾನದ ನಂತರ ಅವರು ಧ್ಯಾನಮಂದಿರಕ್ಕೆ ಹೋಗಿ ಸತ್ಸಂಗವನ್ನು ನಡೆಸಿಕೊಟ್ಟರು.

ಇದಾದ ನಂತರ, ಆಶ್ರಮವನ್ನು ಸುತ್ತಾಡಿದ ಬಳಿಕ ವಿಶೇಷವಾಗಿ, ನೂತನ ಪಾಕಶಾಲೆ ಮತ್ತು ಭೋಜನಶಾಲಾ ಸಮುಚ್ಛಯ, ಇವುಗಳ ನವೀಕರಣ ಮತ್ತು

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ





ನೂತನ ನಿರ್ಮಾಣಗಳ ಬಗ್ಗೆ ಹಲವು ಸುಧಾರಣೆಗಳನ್ನು ಅಳವಡಿಸಿಕೊಳ್ಳಲು ಸೂಚಿಸಿದರು. ಆ ಬಳಿಕ ಅವರಿಗೆ ಬಂದ ಮಿಂಚಂಚೆಗಳನ್ನು ನೋಡಿದರು ಹಾಗು ಆಡಳಿತಾತ್ಮಕ ವಿಷಯಗಳನ್ನು ಚರ್ಚಿಸಿದರು. ಸಂಜೆ ಸತ್ಸಂಗ ನಡೆಸಿ, ಶಹಜಹಾನಪುರದ ಪ್ರೀತಿ ಶ್ರದ್ಧೆಗಳುಳ್ಳ ಅಭ್ಯಾಸಿಯೋರ್ವರ ಮನೆಗೆ ಭೇಟಿ ನೀಡಿದರು.

ಪ್ರವಚನವೊಂದರಲ್ಲಿ ಅವರು, "ನಮ್ಮ ಆಧ್ಯಾತ್ಮಿಕಪ್ರಗತಿ ನಮ್ಮನಡೆವಳಿಕೆಯನ್ನುಪ್ರತಿಬಿಂಬಿಸುವಂತೆ ಇರಬೇಕೆಂದು ಲಾಲಾಜಿ ಮಹಾರಾಜರು ಹೇಳುತ್ತಿದ್ದರು. 'ಹೌದು, ಅವರೊಬ್ಬಸಹಜಮಾರ್ಗದ ಅಭ್ಯಾಸಿ' ಎಂದುಬೇರೆಯವರುಹೇಳುವಂತೆನಾವಿರಬೇಕು. 'ಸಂಜೆಯ ಶುದ್ಧೀಕರಣದ ಅವಶ್ಯಕತೆಯೇ ಬಾರದಂತೆ ಗುರುಗಳ ಸ್ಮರಣೆಯಲ್ಲಿ ಮುಳುಗಿರುತ್ತ ನಾವು ನಮ್ಮ ಜೀವನವನ್ನು ನಡೆಸ'ಬೇಕು. ಅದೇ ಅಂತಿಮ ಸಾಧನೆ." ಎಂದುಹೇಳಿದರು.

ಷಹಜಹಾನಪುರದಲ್ಲಿರುವಾಗ, ಕಮಲೇಶ್ ಭಾಯಿಯವರು ಆಂಧ್ರ ಕರಾವಳಿಯ ಕೆಲಸಗಳನ್ನು ಗಮನಿಸುತ್ತ, ಗ್ರಾಮಸ್ಥರ ದೊಡ್ಡ ಗುಂಪಿಗೆ ಪೀಠಿಕಾ ಬೈಠಕ್ಕುಗಳನ್ನು ದೂರದಿಂದಲೆ ನೀಡುತ್ತಿದ್ದರು.

17 ರಂದು, ಧ್ಯಾನ ಮಂದಿರದಲ್ಲಿ ಸತ್ಸಂಗ ನಡೆಸಿ, ಉಪಹಾರದ ಬಳಿಕ ಬಾಬೂಜಿ ಮಹಾರಾಜರ ಮನೆಗೆ ತೆರಳಿದರು, ಹಾಗು ಬಾಬೂಜಿಯವರು ವಾಸವಿದ್ದ ಮತ್ತು ಕಾರ್ಯ ನಿರ್ವಹಿಸುತ್ತಿದ್ದ ಕೊಠಡಿಯಲ್ಲಿ ಸತ್ಸಂಗ ನಡೆಸಿದರು.

ಮುಂಜಾನೆ 9.30ಕ್ಕೆ ಷಹಜಹಾನ್‌ಪುರದಿಂದ **ಫತೇಗಢ**ಕ್ಕೆ ಪ್ರಯಾಣಿಸಿದರು. ಆಶ್ರಮಕ್ಕೆ ಬಂದವರೆ ಸತ್ಸಂಗ ನೀಡಿದ ಬಳಿಕ ಆಶ್ರಮದ ಜಾಗದ ಅಭಿವೃದ್ಧಿ ಬಗ್ಗೆ ಸಲಹೆಗಳನ್ನು ನೀಡಿದರು. ಅವರ ಭಾಷಣದಲ್ಲಿ, "ಗುರುಗಳಸಂದೇಶವನ್ನು ಜನರಲ್ಲಿಹರಡುವುದೇ ನಮ್ಮ ಗುರುದಕ್ಷಿಣೆ. ಹೊಸ ಅಭ್ಯಾಸಿಗಳು ಸಾಧನೆ ಮುಂದುವರಿಸುತ್ತಾರೊ ಇಲ್ಲವೊ ಅದು ಅವರ ಇಷ್ಟಕ್ಕೆ ಬಿಟ್ಟದ್ದು. ಆದರೆ ಅವರು ಸಹಜ ಮಾರ್ಗದ ಧ್ಯಾನದ ಬಗ್ಗೆ ತಿಳಿದುಕೊಳ್ಳಬೇಕು. ಅವರು ಯಾವಾಗ ಬಯಸಿದರೂ ನಾವು ಭರವಸೆ ನೀಡಬೇಕು, ಅವರಿಗಾಗಿ ನಮ್ಮ ಬಾಗಿಲುಗಳು ತರೆದಿವೆ. ಅವರನ್ನು ವಿಮರ್ಶಿಸದಿರಿ. ಸಹಜ ಮಾರ್ಗವು ಒಂದು ಪ್ರೇಮ ಪಥ."

ತಮ್ಮ ಪ್ರೀತಿಯ ಗುರುಗಳು ಭೋಜನಕ್ಕಾಗಿ ಆಹಾರವನ್ನು ತಾವೇ ಹಂಚುತ್ತಿರುವುದನ್ನು ಕಂಡು ಅಭ್ಯಾಸಿಗಳೆಲ್ಲರು ಪ್ರೇಮ ಮತ್ತು ಕೃತಜ್ಞತೆಗಳಿಂದ ಮುಳುಗಿಹೋಗಿದ್ದರು. ಗುರುಗಳು ಆಶ್ರಮದಲ್ಲಿ ರಾತ್ರಿ ಉಳಿದುಕೊಳ್ಳಲು ನಿರ್ಧರಿಸಿ, ಏಪ್ರಿಲ್ 18 ರಂದು ಸಂಜೆ 6 ಗಂಟೆಗೆ ಫತೇಗಢಕ್ಕೆ ತೆರಳಿದರು.

ಲಖನೌ ಮಾರ್ಗದಲ್ಲಿ, ಹರದೋಯಿಯ ಲೋಕೋಪಯೋಗಿ ಪ್ರವಾಸಿ ಮಂದಿರದಲ್ಲಿ ಅಲ್ಪ ವಿರಾಮ ಪಡೆಯಲು ನಿರ್ಧರಿಸಿದರು. ಲಖನೌ ಆಶ್ರಮಕ್ಕೆ ಹೊರಡುವ ಮೊದಲು ಸ್ಥಳೀಯ ಅಭ್ಯಾಸಿಗಳನ್ನು ಭೇಟಿ ಮಾಡಿ, ಸತ್ಸಂಗ ನಡೆಸಿದರು.

19 ರಂದು, ಕಮಲೇಶ್ ಭಾಯಿಯವರು ಬೇಗನೆ ಎದ್ದರು. ಅವರಿಗೆ ಬಂದ ಮಿಂಚಂಚೆಗಳನ್ನು ಪರಿಶೀಲಿಸಿದ ನಂತರ ಧ್ಯಾನ ಮಂದಿರದಲ್ಲಿ ಮುಂಜಾನೆಯ ಸತ್ಸಂಗ ನಡೆಸಿಕೊಟ್ಟರು. ಸತ್ಸಂಗದ ಬಳಿಕ ಸೂಕ್ಷ್ಮ ಅಭ್ಯಾಸದ ಪ್ರಾಮುಖ್ಯತೆಯನ್ನು ತಮ್ಮ ಭಾಷಣದಲ್ಲಿ ಒತ್ತಿಹೇಳಿದರು. ಶಿಸ್ತಿನ ಅವಶ್ಯಕತೆಯನ್ನು ತಿಳಿಸಿ, ಅದು ಅಭ್ಯಾಸಿಗಳ ವೈಯಕ್ತಿಕ ಲಾಭಕ್ಕಾಗಿಯೆ ಇರುವುದೆಂದರು.

ಅವರು ಕುಟೀರದ ಎಲ್ಲ ಸ್ವಯಂಸೇವಕರೊಂದಿಗೆ ಊಟ ಮಾಡಿದರು ಮತ್ತು ಸಂಜೆ ಧ್ಯಾನ ಮಂದಿರಕ್ಕೆ ಆಗಮಿಸಿ ಸತ್ಸಂಗ ನೀಡಿದರು. ಅವರು ತಮ್ಮ ಪುಟ್ಟ ಭಾಷಣದಲ್ಲಿ, "ವಸ್ತು ವಿಷಯಗಳಿಗಾಗಿ ಆಶಿಸುವುದನ್ನು ನಿಲ್ಲಿಸಿ, ಅವು ಹೇಗಿವೆಯೋ ಹಾಗೇ ಅವುಗಳನ್ನು ಸಂತೋಷದಿಂದ ಸ್ವೀಕರಿಸಲು ಆರಂಭಿಸಿ, ನಾವು ಕಷ್ಟಗಳನ್ನು ಸಂತೋಷದಿಂದಲೆ ಸ್ವೀಕರಿಸಿದರೆ, ಅವುಗಳಿಂದಲೂ ನಾವು ಪಾಠ ಕಲಿಯಬಹುದು. ಒಂದು ಕಹಿ, ಕೋಪ, ಶೀತಲ ಹೃದಯವು ಗುರುಗಳ ಕೃಪೆಯನ್ನು ಹೊರಗೇ ತಡೆದೀತು, ಆದರೆ ಯಾರು ಸದಾಕಾಲ ಸಂತೋಷದಿಂದ ಮತ್ತು ಎಲ್ಲ ಸಂದರ್ಭಗಳಲ್ಲು ಕೃತಜ್ಞತೆಯಿಂದಿರುತ್ತಾರೊ ಅವರು ಗುರುಕೃಪೆಯನ್ನು ಅನಾಯಾಸವಾಗಿ ಪಡೆಯುತ್ತಾರೆ, ಹಾಗು ಅಂಥ ವ್ಯಕ್ತಿಗಳು ಶೀಘ್ರ ಪ್ರಗತಿ ಹೊಂದುತ್ತಾರೆ." ಭೋಜನ ಶಾಲೆಯಲ್ಲಿ ಎಲ್ಲ ಸ್ವಯಂಸೇವಕರೊಂದಿಗೆ ಗುರುಗಳು ಭೋಜನ ಮಾಡಿದುದು, ಅವರೆಲ್ಲರಿಗೆ ಸಂತೋಷವಾಗಿತ್ತು.

ಏಪ್ರಿಲ್ 20 ರಂದು 9 ಗಂಟೆಗೆ ಆಶ್ರಮದಿಂದ ಹೊರಟು ನವದೆಹಲಿಗೆ, ನಂತರ ಅಹಮದಾಬಾದಿಗೆ ಹೋಗಲು ಅಮೌಸಿ ವಿಮಾನ ನಿಲ್ದಾಣದಲ್ಲಿ ವಿಮಾನವೇರಿದರು.



## ಮಣಪಾಕ್ಕಂನಿಂದ ವಾರ್ತೆಗಳು



### ಲ್ಯಾಟಿನ್ ಅಮೆರಿಕ ಮತ್ತು ಇಬೆರಿಯನ್ ಪೆನಿನ್ಸುಲಾ ಅಭ್ಯಾಸಿಗಳಿಗಾಗಿ ಕಮ್ಮಟ: ಫೆಬ್ರವರಿ 9–14

ಬ್ರೆಜಿಲ್, ಚಿಲಿ, ಕೊಲಂಬಿಯ, ಈಕ್ವಡಾರ್, ಫ್ರಾನ್ಸ್, ಹೈಟಿ, ಮಾರ್ಟಿನಿಕ್, ಮೆಕ್ಸಿಕೊ, ಮೊರೊಕ್ಕೊ, ಪೋರ್ಚುಗಲ್, ಸ್ಪೇನ್, ಅಮೆರಿಕ ಸಂಯುಕ್ತ ಸಂಸ್ಥಾನ, ಮತ್ತು ವೆನಿಜುಯೆಲ ದೇಶದ ಅಭ್ಯಾಸಿಗಳು ಈ ಕಮ್ಮಟದಲ್ಲಿ ಭಾಗವಹಿಸಿದ್ದರು.

ಪ್ರತಿದಿನ ಮೂರು ಬಾರಿ ಧ್ಯಾನ ಮತ್ತು ಎರಡು ಕಾರ್ಯಕ್ರಮಗಳು ಇರುತ್ತಿದ್ದವು. ಕಮ್ಮಟದ ಹಲವು ಅಧಿವೇಶನಗಳು; ಆತ್ಮಾವಲೋಕನ, ಸಣ್ಣ ಗುಂಪು ಚರ್ಚೆ, ನಂತರ ಪ್ರತಿನಿಧಿಗಳಿಂದ ವಿಮರ್ಶೆ, ಅವರ ವೈಯಕ್ತಿಕ ಅಭಿಪ್ರಾಯಗಳು ಹಾಗು ಅನುಭವಗಳನ್ನು ಒಳಗೊಂಡಿದ್ದವು. "ಗುರುಗಳನ್ನು ಅಂತರ್ಗತಗೊಳಿಸಿ ಮತ್ತು ಗುರುಗಳ ಉಪದೇಶಗಳನ್ನು ಬಹಿರಂಗಪಡಿಸಿ" ಎಂಬ ವಿಷಯ ಕೇಂದ್ರವಾಗುಳ್ಳ ಸರಣಿ ಗೋಷ್ಠಿಗಳು ಇದ್ದವು. ಪ್ರತಿನಿಧಿಗಳಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವ ಮತ್ತು ಬೇರೆಯವರೊಂದಿಗೆ ಸಂಪರ್ಕಿಸುವಾಗ ಪ್ರಶ್ನೆಗಳಿಗೆ ಉತ್ತರಿಸುವ, ಅನ್ಯರ ಬಗೆಗಿನ ಧೋರಣೆ ಮತ್ತು ಆ ಸಂಪರ್ಕ ತತ್ವಗಳಿಂದಾಗಿ ಅಭ್ಯಾಸಿಗಳಲ್ಲಿ ಉಂಟಾಗುವ ಬದಲಾವಣೆಗಳು; ಲಾಲಾಜಿ ಮಹಾರಾಜರು ಹಾಕಿಕೊಟ್ಟ ಸಂಪರ್ಕ ತತ್ವಗಳಿಗೆ ಪ್ರಾಮುಖ್ಯವಿದ್ದ ಅಧಿವೇಶನವಾಗಿತ್ತು. ಕಮ್ಮಟದ ಕೊನೆಯ ದಿನಗಳಲಿ ್ಲ, ಹಲವು ಅಭ್ಯಾಸಿಗಳು ಪ್ರಶ್ನೆಗಳಿಗೆ ತಮ್ಮ ಉತ್ತರಗಳನ್ನು ಹಂಚಿಕೊಂಡರು ಹಾಗು ತಮ್ಮ ವೈಯಕ್ತಿಕ ಅನುಭವಗಳನ್ನು ಪುರಾವೆಯಾಗಿ ಉದಾಹರಣೆ ನೀಡಿದರು.

ಫೆಬ್ರವರಿ 13 ಶುಕ್ರವಾರ, ಕಮ್ಮಟದ ಪ್ರತಿನಿಧಿಗಳನ್ನು ಉದ್ದೇಶಿಸಿ ಕಮಲೇಶ್ ಭಾಯಿಯವರು ಮಾತನಾಡಿದರು. ಆ ಭಾಷಣದ ಕೆಲವು ಅಂಶಗಳು ಈ ಕೆಳಗಿನಂತಿವೆ:

- ನಮ್ಮ ಜ್ಞಾನವು ನಮ್ಮ ಅನುಭವವನ್ನು ಆಧರಿಸಿರಬೇಕು. ನಮ್ಮ ಆಲೋಚನೆಗಳಲ್ಲಿ ಅಪಾರ ಶಕ್ತಿಯಿದೆ, ಆದರೆ, ಅವು ಹೃದಯಸ್ಪಂದಿ ಅಂತರ್ದೃಷ್ಟಿಯ ಹಾಗೆ ಅನುಭವವನ್ನು ಆಧರಿಸಿರಬೇಕು, ಆಗ ಮಾತ್ರ ಅವು ನಿತ್ಯ ಸತ್ಯವಾಗುತ್ತದೆ.
- ಅತಿಯಾಗಿ ಮಾತನಾಡಬೇಡಿ. ನಮ್ಮ ಬಾಹ್ಯ ನಡವಳಿಕೆಗಳು ನಮ್ಮ ಅಂತರಂಗ ಸೌಂದರ್ಯದ ವ್ಯಕ್ತರೂಪ ಮತ್ತು ಪ್ರತಿಯೊಂದು ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದಾಗ ಶುದ್ಧತೆಯ ಪ್ರಗತಿಯಾಗುತ್ತದೆ.
- ನಮ್ಮ ಶುದ್ಧೀಕರಣದ ವಿಧಾನ ಅತ್ಯಂತ ಪರಿಣಾಮಕಾರಿಯಾದುದು. ಮೂಲ ಶುದ್ಧೀಕರಣದ ಅಭ್ಯಾಸವನ್ನು ನಾವು ಮೂರು ರೀತಿ ವಿಂಗಡಿಸಬಹುದು: (1) ಒಂದು ನಿರ್ಧಾರಕ್ಕೆ ಮೊದಲು ಒಂದು ಕ್ಲುಪ್ತ ಶುದ್ಧೀಕರಣ, ಇದರಿಂದ ನಕಾರಾತ್ಮಕ ಫಲಿತಾಂಶವನ್ನು ತಡೆಗಟ್ಟಬಹುದು, (2) ಯಾರನ್ನಾದರೂ ಭೇಟಿ ಮಾಡುವ ಮುನ್ನ ಒಂದು ಕ್ಲುಪ್ತ ಶುದ್ಧೀಕರಣ, ಆ ವ್ಯಕ್ತಿಯೊಡನೆ ಸಂಭವಿಸಬಹುದಾದ ಉದ್ರಿಕ್ತ ಸಂಭಾಷಣೆಯ ನಿವಾರಣೆಗಾಗಿ ಮತ್ತು (3) ಒಂದು ಕ್ಲುಪ್ತ ಶುದ್ಧೀಕರಣ, ಯಾವುದೇ ನಕಾರಾತ್ಮಕ ಘಟನೆಯ ನಂತರ; ಮಾಡಬಹುದು.

### ಪ್ರಶಿಕ್ಷಕ ಅಭ್ಯರ್ಥಿ ಕಾರ್ಯಕ್ರಮ

**ಮಾರ್ಚ್ 6 ರಿಂದ 15**

ಈ ಕಮ್ಮಟದಲ್ಲಿ 43 ಸೋದರ ಸೋದರಿಯರು ಭಾಗವಹಿಸಿದ್ದರು ಮತ್ತು ಇತ್ತೀಚೆಗೆ ಅಳವಡಿಸಿದ ಪ್ರಶಿಕ್ಷಕರ ಕೆಲಸಗಳಲ್ಲಿನ ಬದಲಾವಣೆ ಬಗ್ಗೆ ಚರ್ಚಿಸಲಾಯಿತು. ಸಹಜ ಮಾರ್ಗದ ತತ್ವ, ಸ್ಥಿತಿಯ ಗಮನಿಸುವಿಕೆ ಮತ್ತು ಹತ್ತು ನಿಯಮಗಳು – ಇವು ಅಧಿವೇಶನದ ವಿಷಯಗಳಾಗಿದ್ದುವು.

ಕಮಲೇಶ್ ಭಾಯಿಯವರು ಮೂರು ಸಂದರ್ಭಗಳಲ್ಲಿ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ತಮ್ಮ ಅಮೂಲ್ಯ ಸಮಯವನ್ನು ಧಾರಾಳವಾಗಿ ನೀಡಿದರು. ಪ್ರಶಿಕ್ಷಕರು ವಿನೀತರಾಗಿರಲು ಮತ್ತು ತಮ್ಮ ಕೆಲಸದಲ್ಲಿ ಅನಾಮಿಕರಾಗಿರಲು ಹಾಗು ಸಾಧನೆಯ ಅಭ್ಯಾಸವನ್ನು ಉತ್ಸಾಹದಿಂದ ಮಾಡುವ ಪ್ರಾಮುಖ್ಯತೆಯನ್ನು ಅವರು ಒತ್ತಿಹೇಳಿದರು. ಸಭಾಂಗಣ ಸಮುಚ್ಛಯದ ಮಹಡಿಯ ಮೇಲೆ ಎಲ್ಲರೊಡನೆ ಅವರು ಭೋಜನಕ್ಕೆ ಸೇರಿಕೊಂಡಾಗ ಅಭ್ಯರ್ಥಿಗಳು ಹರ್ಷಗೊಂಡರು.

ಹೊಸ ಪ್ರಶಿಕ್ಷಕರು ತಮಗೆ ವಹಿಸಿದ ಉದಾತ್ತ ಹಾಗು ಪವಿತ್ರವಾದ ಕಾರ್ಯವನ್ನು ಕೈಗೆತ್ತಿಕೊಳ್ಳಲು ಅನುವಾಗುತ್ತಿರುವಂತೆ, ಸಮಾವೇಶವು ಭ್ರಾತೃಭಾವದೊಡನೆ ಒಂದು ಸಂಕಲ್ಪವನ್ನು ಹೊಂದಿದ ಭಾವನೆಯನ್ನು ಹೊರಹೊಮ್ಮಿಸಿತು.







## ‘ನಮ್ಮ ವಿಧಿಯ ರೂಪಣ’ ಅಖಿಲ ಭಾರತ ಯುವ ಸಮಾವೇಶ – ಮಾರ್ಚ್

ದೇಶಾದ್ಯಂತ 18ರಿಂದ 25ರವರೆಗಿನ ವಯೋಮಾನದ ಸುಮಾರು 450 ಅಭ್ಯಾಸಿಗಳು ಮಿಂಚಂಚೆಯ ಮೂಲಕ ಕಳುಹಿಸಲಾಗುತ್ತಿದ್ದ ಕಾರ್ಯಕ್ರಮಗಳನ್ನು ವಾರಕ್ಕೊಮ್ಮೆಯಂತೆ ನಡೆಸಿ ಎರಡು ತಿಂಗಳಿಗೂ ಹೆಚ್ಚು ಕಾಲ ತಯಾರಿ ಮಾಡಿಕೊಂಡು ಈ ಸಮಾವೇಶಕ್ಕೆ ಆಗಮಿಸಿದ್ದರು. ಕಾರ್ಯಕ್ರಮದಾದ್ಯಂತ “ಮಾಹಿತಿ”ಯ ಬದಲು “ಅನುಭವ” ಪಡೆದುಕೊಳ್ಳುವ ಬಗ್ಗೆ ಒತ್ತು ನೀಡಲಾಗಿತ್ತು.

ಕಾರ್ಯಕ್ರಮವು ಚಾರೀಜಿಯವರ ‘ದೂರದರ್ಶಿಗಳಾಗೋಣ’ ಎಂಬ ಭಾಷಣದೊಂದಿಗೆ ಪ್ರಾರಂಭವಾಯಿತು. ಓರ್ವ ಆಕಾಂಕ್ಷಿಯು ಸಹಜಮಾರ್ಗದ ಕ್ರಮಬದ್ಧ ಅಭ್ಯಾಸದಿಂದ ಇತರರೊಂದಿಗೆ ಸಂಹವನದಿಂದ ಮೈತ್ರೀಭಾವದೆಡೆಗೆ ಹೇಗೆ ವಿಕಾಸಹೊಂದಬಹುದು ಎಂಬುದರ ಬಗ್ಗೆ ಸೋ. ಎಲಿಜ಼ಬತ್ ಡೆನ್ಲೆ ವಿವರಿಸಿದರು. ಇತರೆ ಕಾರ್ಯಕ್ರಮಗಳ ಅಡಿಯಲ್ಲಿ ಸಹಜ ಮಾರ್ಗ ಸಾಧನೆಯ ಬಗ್ಗೆ ಉತ್ತೇಜಿಸುವಂತಹ ಅಧಿವೇಶನಗಳು ಸೇರಿದ್ದವು. ತಮ್ಮ ಪ್ರವಾಸದಿಂದ ಹಿಂತಿರುಗಿದ ನಂತರ ಕಮಲೇಶ ಭಾಯಿಯವರು ಮೂರನೆಯ ದಿನದ ಬೆಳಗಿನ ಹಾಗು ನಂತರ ಪ್ರತಿದಿನದ  ಸತ್ಸಂಗಗಳನ್ನು ನಡೆಸಿಕೊಟ್ಟರು. ಸತ್ಸಂಗಗಳ ನಂತರ ಮಾತನಾಡಿದಾಗ ಅವರು ನೀಡಿದ ಅಮೂಲ್ಯವಾದ ಸಲಹೆಗಳಲ್ಲಿ ಕೆಲವು ಹೀಗಿವೆ:

- ಪ್ರಾರ್ಥನೆ ಮಾಡುವ ವಿಧಿಯಿಂದ ಸದಾಕಾಲ ಪ್ರಾರ್ಥನಾಭಾವದ ಸ್ಥಿತಿಯಲ್ಲೇ ಇರಲು ಮುನ್ನಡೆಯಿರಿ. ಧ್ಯಾನದ ವಿಧಿಯಿಂದ ಧ್ಯಾನಸ್ಥಿತಿಯಲ್ಲಿಯೇ ಸದಾಕಾಲ ಇರಲು  ಮುನ್ನಡೆಯಿರಿ.
- ನಾವು ಭಂಡಾರದಲ್ಲಿರುವಾಗ ಬಾವಿಯೊಳಗೆ ಇಳಿಬಿಟ್ಟ ಬಕೆಟ್ಟಿನಂತೆ ಇರುವೆವು. ನೀರಿನೊಳಗೆ ಮುಳುಗಿಸಿದಾಗ ಅದು ತುಂಬಿದಂತೆ ಭಾಸವಾಗುವುದು. ನೀರಿನಿಂದ ಹೊರಗೆಳೆದ ತಕ್ಷಣ ಸ್ವಲ್ಪ ನೀರು ಚೆಲ್ಲುವುದು. ತೂತುಗಳಿದ್ದರೆ ನೀರೆಲ್ಲವೂ ಸುರಿದು ಹೋಗಿ ಮೇಲೆ ಬರುವಷ್ಟರಲ್ಲಿ ಬಕೆಟ್ಟಿನ ನೀರೆಲ್ಲವೂ ಖಾಲಿಯಾಗುವುದು. ಈ ತೂತುಗಳು ನಮ್ಮ ಹೃದಯದಲ್ಲಿರುವ ಆಸೆಗಳೇ ಹೊರತು ಮತ್ತೇನಲ್ಲ.
- ಎರಡು ಗೋಲಾರ್ಧಗಳನ್ನು ಶೂನ್ಯವು ಹಿಡಿದಿಟ್ಟಿರಲು ಅವುಗಳನ್ನು ಬೇರೆಯಾಗಿಸುವುದು ದುಸ್ತರ. ಆದರೆ ನೀವು ಸ್ವಲ್ಪವೇ ಗಾಳಿಯನ್ನು ತೂರಿಸಿದಲ್ಲಿ ಅವು ಸುಲಭವಾಗಿ ಬೇರೆಯಾಗುವುವು.  ಶೂನ್ಯದ ಶಕ್ತಿಯೇ ಅಂತಹುದು.  ಮೂಲದೊಡನೆ ಪ್ರತ್ಯೇಕಿಸಲಾಗದ ಸಂಬಂಧ ಸೃಷ್ಟಿಸುವ ಸಲುವಾಗಿ ನಿಮ್ಮ ಹೃದಯದಲ್ಲಿ ಅಂತಹ ಶೂನ್ಯತೆಯನ್ನು ಸೃಷ್ಟಿ ಮಾಡಿರಿ. (ಆದರೆ) ಒಂದು ಅತಿ ಸಣ್ಣ ಇಚ್ಛೆಯಿಂದ ಹೃದಯದ ಶೂನ್ಯತೆಯು ಹಾಳಾಗುವುದು.
- ಯಾವಾಗಲೂ ನಿಮ್ಮ ಪೋಷಕರನ್ನು ಪ್ರೀತಿಸಿರಿ ಹಾಗು ಗೌರವಿಸಿರಿ. ಅವರನ್ನು ನೋಯಿಸುವುದರಿಂದ  ಯಾವುದೇ ಪ್ರಾಪ್ತಿಯಿಲ್ಲ.
- ಉದ್ದಿಶ್ಯಪೂರ್ಣ ಇಚ್ಛೆಗಳು ನಮ್ಮ ವಿಧಿಗೆ ಅಡ್ಡಿಯುಂಟುಮಾಡುವವು. ನಾವು ಅಡ್ಡಿ ಮಾಡದಿರುವನ್ನು ಕಲಿತರೆ ವಿಧಿಯು ತಂತಾನೇ ಅನಾವರಣಗೊಳ್ಳುವುದು.
- ನಮ್ಮ ಸಾಧನೆಯಲ್ಲಿ ಎರಡು ವೈಶಿಷ್ಟ್ಯಗಳಿವೆ. ಸಾಧನೆಯಲ್ಲಿ ಪದ್ಧತಿಯ ಆಚರಣೆ ಪ್ರತಿಶತ 5ರಷ್ಟಾದರೆ, ನಮ್ಮ ಮನೋಭಾವ ಪ್ರತಿಶತ 95 ರಷ್ಟು ಪರಿಗಣನೆಯಾಗುವುದು. ಪದ್ಧತಿಯ ಆಚರಣೆಯನ್ನು ಹೇಳಿಕೊಡಬಹುದು. ಮನೋಭಾವವನ್ನು ಹೇಳಿಕೊಡಲಾಗದು. ಪ್ರತಿಯೊಬ್ಬರೂ ಅದನ್ನು ಬೆಳೆಸಿಕೊಳ್ಳಬೇಕಷ್ಟೆ.

ಕಮಲೇಶ ಭಾಯಿಯವವರು ಎರಡು ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು ಮತ್ತು ನಮ್ಮ ಆಂತರ್ಯದಿಂದ ಮಾರ್ಗದರ್ಶನ ಪಡೆಯುವುದನ್ನು ಒತ್ತಿಹೇಳುತ್ತ, ಉಲ್ಲಸಿತರಾಗಿ ಪ್ರತಿಕ್ರಿಯೆಗಳನ್ನು ನೀಡಿದರು. ತಂಡವನ್ನು ಭೇಟಿ



ಮಾಡಿದ್ದಕ್ಕಾಗಿ ಅವರು ಸಂತೋಷಗೊಂಡರು. ಎಲ್ಲರು ಮುಂದೆ ಹೆಚ್ಚಿನ ಕಾರ್ಯಗಳಿಗೆ ತಮ್ಮನ್ನು ಅಣಿಗೊಳಿಸಿಕೊಳ್ಳಲೆಂದು ಆಶಿಸುತ್ತ, ಈ ಕೆಳಕಂಡ ಪುಸ್ತಕಗಳನ್ನು ಬಹು ಆಳವಾಗಿ ಅಭ್ಯಸಿಸಲು ಅವರು ಶಿಫಾರಸ್ಸು ಮಾಡಿದರು: ನನ್ನ ಗುರುದೇವ, ಮಾನವ ವಿಕಾಸದಲ್ಲಿ ಸದ್ಗುರುವಿನ ಪಾತ್ರ, ವ್ಯಕ್ತಿತ್ವದ ಅನಾವರಣ, ಪ್ರೇಮ ಮತ್ತು ಮರಣ, ರಾಮಚಂದ್ರರ ಸಂಪೂರ್ಣ ಕೃತಿಗಳು.

ಸಮಾವೇಶವು ಕೊನೆಗೊಳ್ಳುತ್ತಿರುವಂತೆ, ಅಂತಹ ಸಂದರ್ಭಗಳಲ್ಲಿ ವ್ಯಕ್ತಗೊಳ್ಳುವ ವಿಷಾದಭರಿತ ವಿದಾಯಕ್ಕೆ ಬದಲಾಗಿ ಅತ್ಯುತ್ಕಟ ಹರ್ಷೋಲ್ಲಾಸ ಹಾಗು ಹೊಸತನಕ್ಕೆ ನಾಂದಿ ಹೇಳುವ ಭಾವನೆ ತುಂಬಿ ತುಳುಕುತ್ತಿತ್ತು.

## ಪೂರ್ವ ರಾಜ್ಯಗಳ ಪ್ರಶಿಕ್ಷಕರ ಸಮಾವೇಶ

**ಮಾರ್ಚಿ 24 ರಿಂದ 28, 2015**



'ಗುರುಗಳನ್ನು ಅಂತರೀಕರಿಸಿ ಅವರ ಬೋಧನೆಗಳನ್ನು ಬಾಹ್ಯಗೊಳಿಸಿ' ಎಂಬ ಶೀರ್ಷಿಕೆ ಹೊತ್ತ ಸಮಾವೇಶದಲ್ಲಿ ಪಶ್ಚಿಮ ಬಂಗಾಳ, ಬಿಹಾರ, ಒಡಿಸ್ಸ, ಝಾರ್ಖಂಡ್ ಮತ್ತು ಸಿಕ್ಕಿಂ ರಾಜ್ಯಗಳಿಂದ ಆಗಮಿಸಿದ್ದ ಸುಮಾರು 82 ಪ್ರಶಿಕ್ಷಕರು ಹಾಗು ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದ ಆಗಮಿಸಿದ್ದ ಆಹ್ವಾನಿತರು ಸಹ ಪಾಲ್ಗೊಂಡಿದ್ದರು.

ಪ್ರಶಿಕ್ಷಕರ ನಡುವೆ ನೈಜ ಭ್ರಾತೃತ್ವವನ್ನು ವೃದ್ಧಿಪಡಿಸಿ ಪರಸ್ಪರ ಸಹಕಾರ ಮತ್ತು ವಿಚಾರ ವಿನಿಮಯವನ್ನು ಪ್ರೋತ್ಸಾಹಿಸುವ ಇಂತಹ ಸಮಾವೇಶಗಳಿಗೆಂದೇ ಚಾರೀಜಿ ಮಹಾರಾಜರು ನೀಡಿರುವ ಪ್ರಮುಖ ಉದ್ದೇಶಗಳನ್ನು ಅಳವಡಿಸಿಕೊಂಡು ಎಂಟು ಮಂದಿ ಸಹಯೋಜಕರ ತಂಡವೊಂದು ಕಾರ್ಯಕ್ರಮವನ್ನು ಸಂಯೋಜಿಸಿತ್ತು

ಅನೇಕ ಮಾತುಕತೆಗಳು ಮತ್ತು ಚರ್ಚಿತಗೊಂಡ ನಿರೂಪಣಾ ವಿಷಯಗಳಲ್ಲಿ ಕೆಲವು ಹೀಗಿವೆ: 'ಅರಿವಿನೊಂದಿಗೆ ಜೀವನ ಶೈಲಿ', 'ಸಂಸ್ಕರಣೆ ಮತ್ತು ವಿಧಿ' ಮತ್ತು 'ಮಾಡುವುದು ಮಾಡದಿರುವುದು'. ಪ್ರತಿಯೊಂದು ಸಭೆಯು, ಈ ವರ್ಷದ ಮೊದಲಲ್ಲಿ ಕಮಲೇಶ ಭಾಯಿಯವರು ಪ್ರಕಟಿಸಿರುವ ಹೊಸ ವಿಧಾನಗಳಲ್ಲಿ ಒಂದನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ಆರಂಭವಾಯಿತು. 'ಹಾರ್ಟ್‌ಫುಲ್‌ನೆಸ್' ಎಂಬ ವಿಶ್ರಾಂತಿ ಹೊಂದುವ ಪದ್ಧತಿಯನ್ನು ಕಲಿಯುವ ಅವಕಾಶ ಕೂಡ ಪ್ರತಿಯೊಬ್ಬರಿಗೂ ದೊರೆಯಿತು.

ಕೊನೆಯ ದಿನದ ಸಂಜೆಯ ವೇಳೆ, ಕಮಲೇಶ ಭಾಯಿಯವರು ಶ್ರೋತೃಮಂದಿರದ ಮಾಳಿಗೆಯ ಮೇಲೆ ಅತಿಥಿ ಸತ್ಕಾರಕ್ಕಾಗಿ ಔತಣಕೂಟವನ್ನು ಏರ್ಪಡಿಸಿದ್ದರು. ಅವರು ಎಲ್ಲ ಅಭ್ಯಾಸಿಗಳೊಡನೆ ಅತ್ಯಂತ ಹೃತ್ಪೂರ್ವಕವಾಗಿ ಪ್ರತಿಕ್ರಿಯಿಸುತ್ತ ಪ್ರತಿಯೊಬ್ಬರ ಹೃದಯವನ್ನು ಮಿಡಿಸಿದರು. ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವ ತವಕವನ್ನು ಅಭ್ಯಾಸಿಗಳು ವ್ಯಕ್ತಪಡಿಸಿದರು.

## ಸಂದೇಶಗಳ ಪ್ರಸಾರ

ಪ್ರಕಾಶಂ ಜಿಲ್ಲೆಯ ಯಡ್ಡನಪುಡಿ ಮಂಡಳಕ್ಕೆ ಸೇರಿದ ಯನಮಡಾಲ ಎಂಬುದು ಒಂದು ಸಣ್ಣ ಹಳ್ಳಿ. ಗೌರವಾನ್ವಿತ ಕಮಲೇಶ ಭಾಯಿಯವರು ಆಂಧ್ರ ಕರಾವಳಿಯ ತಮ್ಮ ಪ್ರವಾಸದಲ್ಲಿ ಈ ಹಳ್ಳಿಗೆ ಏಪ್ರಿಲ್ 6ರಂದು ಭೇಟಿ ನೀಡಿ ಒಂದು ಮುಕ್ತ ಸಭೆಯನ್ನು ನಡೆಸಿಕೊಟ್ಟರು.ಸುಮಾರು 250 ಮಂದಿ ಹಳ್ಳಿಯ ಜನರು ಸಹಜಮಾರ್ಗ ಪದ್ಧತಿಯಲ್ಲಿನ ಧ್ಯಾನಕ್ರಮದ ಬಗ್ಗೆ ಹೆಚ್ಚಿನ ತಿಳುವಳಿಕೆಗಾಗಿ ನೆರೆದಿದ್ದರು.ಅವರು 'ಜೀವನದ ಗುರಿ ಮತ್ತು ಧ್ಯಾನದ ಅವಶ್ಯಕತೆ'ಯ ಬಗ್ಗೆ ಒಂದು ಸಂದೇಶವನ್ನು ನೀಡಿದರು.ಸೋ. ಉಮಾ ಗಂಗಾಧರ್ (ನೆಲ್ಲೂರು ಕೇಂದ್ರದ ವ್ಯವಸ್ಥಾಪಕರು) ಸಂದೇಶವನ್ನು ತೆಲುಗಿಗೆ ಭಾಷಾಂತರ ಮಾಡಿದರು.ಈ ಮುಕ್ತ ಸಭೆಯಲ್ಲಿ ಸ್ಥಳೀಯ ಶಾಸಕರು ಸಹ ಭಾಗವಹಿಸಿದ್ದರು.ತಮ್ಮ ಕ್ಷೇತ್ರಮಟ್ಟದ ಸಭೆ ಮರ್ತೂರ್ ನಲ್ಲಿ ನಡೆಯುವ ವೇಳೆ ಮತ್ತೊಂದು ಮುಕ್ತ ಸಭೆಯನ್ನು ನಡೆಸಿಕೊಡುವಂತೆ ಅವರು ಕಮಲೇಶ ಭಾಯಿಯವರಲ್ಲಿ ವಿನಂತಿಸಿಕೊಂಡರು.ಕಮಲೇಶ ಭಾಯಿಯವರು ಸಮಾವೇಶದ ಸಮಯದಲ್ಲಿ ವ್ಯಕ್ತಗೊಂಡ ಹಲವು ಪ್ರಶ್ನೆಗಳಿಗೆ ಉತ್ತರ ನೀಡುತ್ತಾ ಧ್ಯಾನದ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದರು.

ಶಾಸಕರ ಕೋರಿಕೆಯ ಮೇರೆಗೆ ಪ್ರಕಾಶಂ ಜಿಲ್ಲೆಯ ಮರ್ತೂರಿನಲ್ಲಿ ಮತ್ತೊಂದು ಮುಕ್ತ ಸಭೆಯನ್ನು ಏಪ್ರಿಲ್ 16ರಂದು ನಡೆಸಲಾಯಿತು. 800 ಸರ್ಕಾರಿ ಮತ್ತು ಸರ್ಕಾರೇತರ ಅಧಿಕಾರಿಗಳು ಈ ಸಭೆಯಲ್ಲಿ ಹಾಜರಿದ್ದರು. ಸೋ. ಉಮಾ ಗಂಗಾಧರ್ ಸಹಜ ಮಾರ್ಗ ಪದ್ಧತಿಯ ಧ್ಯಾನದ ಕ್ರಮ ಮತ್ತು ಗುರಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.ತದನಂತರ ಡಾ. ವೆಂಕಟ್ ಆರ್ ಎಡಾರ ರವರು ಸಂಕ್ಷಿಪ್ತವಾಗಿ ಧ್ಯಾನದಿಂದ ಉಂಟಾಗುವ ಪ್ರಯೋಜನಗಳ ಬಗ್ಗೆ ವಿವರಣೆ ನೀಡಿದರು.ಅವರು ಎಲ್ಲರಿಗು 10 ನಿಮಿಷಗಳ ಕಾಲ ಧ್ಯಾನಕ್ಕೆ ಕುಳಿತುಕೊಳ್ಳುವಂತೆ ಸೂಚಿಸಿದರು.ಧ್ಯಾನದ ಅನಂತರ ಅವರೆಲ್ಲರು ಆರಾಮವೆನಿಸಿದಂತೆಯೂ ಹಾಗು ಅಸಾಮಾನ್ಯ ಶಾಂತ ಸ್ಥಿತಿಯನ್ನು ಅನುಭವಿಸಿದ್ದಾಗಿ ಕೆಲವರು ಹೇಳಿದರು.ಈ ಸಮಯದಲ್ಲಿ ಕಮಲೇಶ ಭಾಯಿಯವರು ಷಹಜಾನಪುರದಲ್ಲಿ ಇದ್ದರು. ಅವರು ಇಲ್ಲಿ ಹಾಜರಿದ್ದ 800 ಮಂದಿಗೆ ದೂರವರ್ತಿ ಬೈಠಕ್ಕನ್ನು ಸುಮಾರು 40 ನಿಮಿಷಗಳವರೆಗೆ ನೀಡಿದರು. ಬೈಠಕ್ಕಿನ ನಂತರ ಕಮಲೇಶ ಭಾಯಿಯವರು ಸಭೆಯನ್ನುದ್ದೇಶಿಸಿ ಎರಡನೆ ಮತ್ತು ಮೂರನೆಯ ವೈಯಕ್ತಿಕ ಬೈಠಕ್ಕನ್ನು ರಾತ್ರಿ 9 ಗಂಟೆಗೆ ತೆಗೆದುಕೊಂಡು ತಮ್ಮ ಪ್ರಾರಂಭಿಕ ಬೈಠಕ್ಕುಗಳನ್ನು ಪೂರ್ಣಗೊಳಿಸಿಕೊಳ್ಳುವಂತೆ ತಿಳಿಸಿದರು.17 ಮತ್ತು 18 ರಂದು ಅನೇಕ ಸ್ವಯಂ ಸೇವಕರು ಕಾರ್ಯಕ್ರಮವನ್ನು ನಿಯೋಜಿಸಲು ಸಕ್ರಿಯವಾಗಿ ಪಾಲ್ಗೊಂಡಿದ್ದರು.



# ಯೂಥ ಕನೆಕ್ಟ್ ಚಟುವಟಿಕೆಗಳು

## ಗಾಜ಼ಿಯಾಬಾದ್



ಗಾಜ಼ಿಯಾಬಾದ್‌ನ ಶಾಂತಿಕುಂಜ ಆಶ್ರಮದಲ್ಲಿ 29ನೇಮಾರ್ಚ್ ರಂದು ಒಂದು ದಿನದ ಯೂ-ಕನೆಕ್ಟ್ ವಿಚಾರ ಸಂಕಿರ್ಣವನ್ನು ವ್ಯವಸ್ಥೆಗೊಳಿಸಲಾಗಿತ್ತು. ಸಂಕಿರಣದಲ್ಲಿ ಆಗ್ರಾ ಕೇಂದ್ರವು ಸೇರಿದಂತೆ ಮೀರತ್, ಹಾಪುರ್, ಗ್ವಾಲಿಯರ್, ಮುಜ಼್ಫರ್ ನಗರ, ಮೊರದಾಬಾದ್, ನೋಯಿಡ, ವೈಶಾಲಿ, ಡೆಲ್ಲಿ ಮತ್ತು ಗುರಗಾಂವ್ ಕೇದ್ರಗಳಿಂದ 80ಕ್ಕೂ ಹೆಚ್ಚು ಭಾಗಿಗಳು ಹಾಜರಿದ್ದರು.

ಸಹೋದರ ಸುಮಿತ್ ಅರೋರ (ಕೇಂದ್ರ ಸಂಚಾಲಕರು, ಗಾಜ಼ಿಯಾಬಾದ್) ಮತ್ತು ಸಹೋದರ ಹರ್ಪ್ರೀತ್ ಭಾನ್ (ನೋಯಿಡ) ರವರು ಅಧಿವೇಶನವನ್ನು ನಡೆಸಿಕೊಟ್ಟರು ಮತ್ತು ಯೂ-ಕನೆಕ್ಟ್ ಕಾರ್ಯಕ್ರಮದ ವಿಶಯ, ಉದ್ದೇಶ, ಮತ್ತು ವಿಧಾನಗಳ ಬಗ್ಗೆ ಪರಿಚಯಿಸಿದರು. ಭಾಗಿಗಳಿಂದ ಬಂದ ಪ್ರಶ್ನೆಗಳಿಗೆ ಒಟ್ಟಾಗಿ ಅವರುಗಳು ಪ್ರತಿಕ್ರಿಯಿಸಿದರು. ಮನೋಧರ್ಮ ಮತ್ತು ಯೋಗ ಎಂಬ ಒಂದು ಅಣುಕು ಪ್ರದರ್ಶನದ ಅಧಿವೇಶನವನ್ನು ಸ್ವಯಂಸೇವಕರುಗಳು ಪ್ರದರ್ಶಿಸಿದರು. ವಿಚಾರಣ ಸಂಕಿರಣದ ಕೊನೆಯಲ್ಲಿ, ಈ ಸ್ವಯಂವಿಕಸನ ಕಾರ್ಯಕ್ರಮವನ್ನು (SDP) ಪಠ್ಯಕ್ರಮದಲ್ಲಿ ಸೇರಿಸಬಹುದಾದಂತಹ ವಿದ್ಯಾಸಂಸ್ಥೆಗಳನ್ನು ತಮ್ಮ ಸ್ಥಳಿಯ ಪ್ರದೇಶದಲ್ಲಿ ತೋರಿಸಿಕೊಡಬೇಕೆಂದು ಭಾಗಿಗಳನ್ನು ವಿನಂತಿಸಿಕೊಳ್ಳಲಾಯಿತು.

## ಕೊಲ್ಹಾಪುರ

ಕೊಲ್ಹಾಪುರದ ಭೀಮಾ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಟೆಕ್ನಾಲಜಿ ವಿದ್ಯಾಸಂಸ್ಥೆಯ ಎಂಬಿಎ ವಿದಾರ್ಥಿಗಳಿಗಾಗಿ ಪರಿಚಯಿಸಿದಂತಹ SDPಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಕಾರ್ಯಕ್ರಮಕ್ಕೆ ಅತ್ಯುತ್ತಮವಾದ ಬೆಂಬಲವು ಶಾಲಾ ಮುಖ್ಯಸ್ಥರಿಂದ ದೊರೆಯಿತು. ಆಗಸ್ಟ್ 2014ರಿಂದ ಫೆಭ್ರವರಿ 2015ರವರೆಗೆ ಒಟ್ಟಾರೆ 12 ಅಧಿವೇಶನಗಳನ್ನು ನಡೆಸಿಕೊಟ್ಟರು. ಈ ಪರಸ್ಪರ ಅಧಿವೇಶನಗಳಲ್ಲಿ 31 ವಿದ್ಯಾರ್ಥಿಗಳು ಭಾಗವಹಿಸಿದ್ದರು ಮತ್ತು ಇವು ಭಾಗಿಗಳಿಂದ ತಮ್ಮನ್ನು ತೊಡಗಿಸಿಕೊಳ್ಳುವ ಉತ್ತೇಜನಕರವಾದ ಪ್ರತಿಕ್ರಿಯೆಯನ್ನು ಪಡೆದವು. ಕೆಲವೊಂದು ಅಧಿವೇಶನಗಳಲ್ಲಿ ಭೀಮಾ ವಿದ್ಯಾಸಂಸ್ಥೆಯ ಬೋಧಕ ವರ್ಗದ ಸದಸ್ಯರು ಹಾಜರಿದ್ದರು ಮತ್ತು ಈ ಕಾರ್ಯಕ್ರಮದ ಮುಖಾಂತರ ಮೂಡಿ ಬಂದಂತಹ ತಿರುಳು ಮತ್ತು ಮೌಲ್ಯದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಸುಮಾರು 27 ವಿದ್ಯಾರ್ಥಿಗಳಿಗೆ ಕ್ರಮಬದ್ಧವಾದ ಧ್ಯಾನದ ಅಭ್ಯಾಸವನ್ನುಪರಿಚಯಿಸಲಾಯಿತು ಮತ್ತು ಅವರುಗಳು ಬೈಠಕ್‌ಗಳನ್ನು ತೆಗೆದುಕೊಂಡರು. ಸಾಮೂಹಿಕ ಸತ್ಸಂಗಗಳನ್ನು ಕಾಲೇಜಿನ ಆವರಣದಲ್ಲಿ ನಡಸಿಕೊಡಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಅದ್ದೂರಿಯಾಗಿ ನಡೆದಂತಹ ಕಾರ್ಯಕ್ರಮದಲ್ಲಿ ಶ್ರೀಯುತ ಎ.ಕೆ. ಗುರವ್‌ರವರು ಪ್ರಮಾಣ ಪತ್ರಗಳನ್ನು ವಿತರಿಸಿದರು. ಈ ಒಂದು ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು ಮತ್ತು ಯಾವ ರೀತಿ ಧ್ಯಾನದ ಕೌಶಲ್ಯದಿಂದ ಅವರುಗಳಿಗೆ ಲಾಭವಾಯಿತು ಎಂದು ವಿವರಿಸಿದರು.

ಜುಲೈ 2015ರಲ್ಲಿ ನಡೆಯುವ ಯೂ-ಕನೆಕ್ಟ್‌ನ ಕಾರ್ಯಕ್ರಮದ ವೇಳಾಪಟ್ಟಿಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ವಿಧ್ಯಾರ್ದಿಗಳಿಗಾಗಿ ಇದರ ಅನುಕೂಲವನ್ನು ವಿಸ್ತರಿಸಲು ವಿಶೇಷವಾದ ಸ್ಥಾನವನ್ನು ನಿಗದಿ ಗೊಳಿಸಲಾಗುವುದು ಎಂದು ಪ್ರಕಟಿಸಿದರು.

## ಕೊಲ್ಕಾತ್ತಾ

ಮಾರ್ಚ್ 14 ಮತ್ತು15ರಂದು ಕಲ್ಕತ್ತಾದ ಬಿ.ಎಮ್.ಎ 2ದಿನ ಯೂ-ಕನೆಕ್ಟ್, ಬೋಧಕ ವಿಭಾಗದವರಿಗಾಗಿ ಅಭಿವೃದ್ಧಿ ತರಬೇತಿಯ ಕಾರ್ಯಗಾರವನ್ನು ವ್ಯವಸ್ಥಿತಗೊಳಿಸಿದ್ದರು. ಸುಮಾರು 75 ಅಭ್ಯಾಸಿಗಳು ಬಿಹಾರ, ಜಾರ್ಖಂಡ್, ಅಸ್ಸಾಂ, ಮತ್ತು ಪಶ್ಚಿಮಬಂಗಾಲದಿಂದ ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಯೂ-ಕನೆಕ್ಟ್‌ನ ನೇತೃತ್ವದ ಮೇಲ್ನೋಟವನ್ನು ನೀಡಲಾಗುವುದರ ಜೊತೆಗೆ ಯೂ-ಕನೆಕ್ಟ್ ತಂಡದವರು ವಿಷಯಕ್ಕೆ ಸಂಬಂಧಿಸಿದಂತೆ ಸಿದ್ಧಗೊಳಿಸಿದ ಕಾರ್ಯಕ್ರಮದ ಪ್ರಕಾರ ಸಂಯೋಜಕರು, ಬೋಧಕವರ್ಗದವರುಗಳ ಪಾತ್ರ ಮತ್ತು ಜವಾಬ್ದಾರಿ, ಯಾವ ರೀತಿ ವಿದ್ಯಾಸಂಸ್ಥೆಗಳಲ್ಲಿ ಪ್ರಸ್ತಾವಿಸಬೇಕು ಎಂಬುದರ ಬಗ್ಗೆ ಚರ್ಚಿಸಲಾಯಿತು. ಭಾಗಿಗಳನ್ನು 5 ಗುಂಪುಗಳಾಗಿ ವಿಭಜಿಸಲಾಯಿತು. ಪ್ರತಿಯೊಂದು ಗುಂಪಿಗು ಯೂ-ಕನೆಕ್ಟ್ ಪಠ್ಯಕ್ರಮದ ಪ್ರಕಾರ ಅಧ್ಯಾಯವನ್ನು ನಿಯೋಜಿಸಲಾಯಿತು, ಅಭ್ಯರ್ಥಿಗಳು ಕೊಟ್ಟಿರುವ ವಿಷಯ ವಸ್ತುವಿನ ಮೇಲೆ ಅಣಕು ಕಾರ್ಯಕ್ರಮವನ್ನು ಸಹ ಪ್ರಸ್ತುತ ಪಡಿಸಬೇಕಾಗಿತ್ತು. ಈ ಕಾರ್ಯಕ್ರಮವು ಪ್ರತಿಕ್ರಿಯೆಯ ಅವಧಿಯೊಂದಿಗೆ ಮತ್ತು ಸ್ಪಷ್ಟರೂಪತೆಯ ಕ್ರಿಯಾ ಯೋಜನೆಯೊಂದಿಗೆ ಮುಕ್ತಾಯವಾಯಿತು.





## ಉತ್ತರ ಆಂಧ್ರಪ್ರದೇಶ

ಯೂ ಕನೆಕ್ಟ್ ಚಟುವಟಿಕೆಗಳು...



ದಿನಾಂಕ 14 ಮತ್ತು15ನೇ ಮಾರ್ಚ್‌ರಂದು ವಲಯ 1Aದ ವಾರಂಗಲ್ ಆಶ್ರಮ, ಅಶ್ವಪುರಂ ಕೇಂದ್ರ ಮತ್ತು ಸತುಪಲ್ಲಿ ಕೇಂದ್ರದಲ್ಲಿ ಅಣುಕು ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು. ಧ್ಯಾನ, ಮೌಲ್ಯ, ಯೋಗ, ಧರ್ಮ ಮತ್ತು ಆತಂರಿಕ ಬೆಳವಣಿಗೆಯು ಬಾಹ್ಯ ಬೆಳವಣಿಗೆಗೆ ಕಾರಣವಾಗುವ ವಿಶಯಗಳ ಬಗ್ಗೆ ಪ್ರಸ್ತುತಿಗಳನ್ನು ನೀಡಲಾಯಿತು, ನಂತರ ಗುರುಗಳ ವಿಡಿಯೊವನ್ನು ಪ್ರದರ್ಶಿಸಲಾಯಿತು. ಯುವಕರನ್ನು ಒಳಗೊಂಡಂತೆ ಹಲವು ಸ್ಥಳೀಯ ಅಭ್ಯಾಸಿಗಳು ಮತ್ತು ಪ್ರಶಿಕ್ಷಕರುಗಳು ಸಹ ಇದರಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮವು ಯುವ ಜನತೆಯು ಒಬ್ಬರನ್ನೊಬ್ಬರು ಅರಿತುಕೊಂಡು ಸಹಜಮಾರ್ಗದ ಸಂಪರ್ಕವನ್ನೇರ್ಪಡಿಸಿಕೊಳ್ಳಲು ಅವಕಾಶವನ್ನು ಒದಗಿಸಿತ್ತು. ವಿದ್ಯಾರ್ಥಿಗಳು ಬಹಳ ಉತ್ಸಾಹದಿಂದ ಮತ್ತು ಮುಕ್ತವಾಗಿ ಪಾಲ್ಗೊಂಡಿದ್ದರು.

ಯು–ಕನೆಕ್ಟ್ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಸಂಪರ್ಕಿಸಿ: http://www.sahajmarg.org/resources/programs/uconnect

## ಮೌಲ್ಯಗಳ ಶಿಕ್ಷಣ:



SHPT ಸಂಸ್ಥೆಯವರು ಪ್ರಾರಂಭಿಸಿದ ಮೌಲ್ಯಗಳ ಶಿಕ್ಷಣ ಕಾರ್ಯಕ್ರಮ ದೇಶದ ವಿವಿಧ ಭಾಗಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಸ್ತುತಿಯಲ್ಲಿದೆ. ಹಲವು ಶಾಲೆಗಳು ಏಪ್ರಿಲ್ ಮಾಹೆಯಿಂದ ಪ್ರಾರಂಭವಾಗುವ ಹೊಸ ಶೈಕ್ಷಣಿಕ ಅವಧಿಯಲ್ಲಿ ಅಧ್ಯಯನ ವಿಷಯಗಳಲ್ಲಿ ಮೌಲ್ಯಶಿಕ್ಷಣ ಪಠ್ಯಕ್ರಮವನ್ನು ಒಂದು ಭಾಗವಾಗಿ ಸೇರಿಸಿಕೊಳ್ಳಲು ಆಯ್ಕೆ ಮಾಡಿಕೊಂಡಿವೆ. ನಮ್ಮನ್ನು ತಲುಪಿರುವ ವರದಿಗಳಲ್ಲಿ ಇವು ಕೆಲವೊಂದಾಗಿವೆ.

ಈ ಮೌಲ್ಯಶಿಕ್ಷಣವು ಏಪ್ರಿಲ್ ಮಾಹೆಯಲ್ಲಿ ರಾಜಸ್ಥಾನದ **ರಬ್ರಿಯಾವಾಸ್**ನಲ್ಲಿರುವ ಅಂಬುಜಾ ಪಬ್ಲಿಕ್ ಶಾಲೆಯ 8 ಮತ್ತು 9ನೇ ತರಗತಿಯಲ್ಲಿ ಪ್ರಾರಂಭಿಸಲ್ಪಟ್ಟಿತ್ತು. ಆರಂಭಿಕ ಅಧಿವೇಶನಗಳ ನಂತರ ವಿದ್ಯಾರ್ಥಿಗಳು ಈ ತರಗತಿಗಳ ಕಡೆಗೆ ಸಕಾರಾತ್ಮಕ ನಿಲವು ಮತ್ತು ಉತ್ಸಾಹದ ಪ್ರತಿಕ್ರಿಯೆ ತೋರಿಸಿದ್ದಾರೆ.



ಈ ಮೌಲ್ಯಶಿಕ್ಷಣವು **ಸಿಲಿಗುರಿಯ** ಸೆಂಟ್ ಮೈಕೇಲ್ಸ್ ಶಾಲೆಯಲ್ಲಿ 2015–16ರ ಅವಧಿಗಾಗಿ ಪ್ರಾರಂಭಿಸಲ್ಪಟ್ಟಿತು. 9 ಮತ್ತು 8ನೇ ದರ್ಜೆಯವರಿಗೆ ಕ್ರಮವಾಗಿ 7 ಮತ್ತು 11ನೇ ಏಪ್ರಿಲ್ ತಿಂಗಳಿನಲ್ಲಿ ಪ್ರಸ್ತುತಿಗಳನ್ನು ನಡೆಸಿಕೊಡಲಾಯಿತು. ಹಾಗೆಯೇ 6 ಜೀವನಮೌಲ್ಯಗಳನ್ನು ಸಕ್ರಿಯ ಕಲಿಕೆಯ ಮುಖಾಂತರ ತಲುಪಿಸುವ ವಿಚಾರವನ್ನು ನೀಡಲಾಯಿತು. ಒಟ್ಟಾರೆ ಈ ಅಧಿವೇಶನಗಳು ಬಹಳ ಆಸಕ್ತಿಯುಳ್ಳದಾಗಿದ್ದು ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು.

ದಿನಾಂಕ 7ನೇ ಏಪ್ರಿಲ್‌ರಂದು ಅಧ್ಯಾಪಕರುಗಳಿಗಾಗಿ ಕೇಂದ್ರಿಯ ವಿದ್ಯಾಲಯ, ನಂ.2, ರೈಲ್ವೇಬಡಾವಣೆ, **ಜಪತಪುರ್**ನಲ್ಲಿ ಮೌಲ್ಯ ಶಿಕ್ಷಣದ ಕಾರ್ಯಕ್ರಮವನ್ನು ವ್ಯವಸ್ಥಿತಗೊಳಿಸಲಾಗಿತ್ತು. ಅಭ್ಯರ್ಥಿಗಳಿಗೆ ಕಾರ್ಯಕ್ರಮದ ಮೇಲ್ನೋಟದ ಜೊತೆಗೆ ಮೌಲ್ಯವನ್ನು ಬೆಳೆಸುವುದರ ಮಹತ್ವಕ್ಕೆ ಒತ್ತು ತಿಳಿಸಲಾಯಿತು. ಅವಧಿಯ ಕಟ್ಟಕಡೆಗೆ ಅಧ್ಯಾಪಕರುಗಳು ತರಗತಿಗಳನ್ನು ನಡೆಸಲು ಸಹಾಯ ಮಾಡುವುದಾಗಿ ಸ್ವಯಂಸೇವಕರುಗಳಿಗೆ ಭರವಸೆ ನೀಡಿದರು.




ನಿಮ್ಮ ಪ್ರದೇಶದಲ್ಲಿ ಮೌಲ್ಯಾಧಾರಿತ ಶಿಕ್ಷಣದಲ್ಲಿ ಪಾಲ್ಗೊಳ್ಳಲು ಸಂಪರ್ಕಿಸಿ:

http://www.sahajmarg.org/resources/programs/values-education

## ಯುವ ಚಟುವಟಿಕೆ

### ಶೋಲವಂದನ, ತಮಿಳುನಾಡು



ಏಪ್ರಿಲ್ 14, 2015ರಂದು ಮಧುರೈ, ಚಿನ್ನಲಪಟ್ಟಿ, ಶಿವಗಂಗೈ ಮತ್ತು ಶೋಲವಂದನದಿಂದ ಆಗಮಿಸಿದ 30 ಸಾಧಕರಿಗಾಗಿ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪೂಜ್ಯ ಗುರುಗಳ ಕಡೆಗೆ ಬೆಳೆಯುವ ತವಕ, ಅನುಸರಿಸುವ ಪದ್ಧತಿ ಮತ್ತು ಮಿಷನ್ ವಿಷಯಗಳ ಕುರಿತು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡರು. "ಸತ್ಯೋದಯ" ಪುಸ್ತಕಮತ್ತುಪೂಜ್ಯ ಗುರುಗಳಹಿತನುಡಿಗಳಮೇಲೆ ತುಂಬ ಆಸಕ್ತಕರ ವಿಷಯಗಳನ್ನುಪ್ರಸ್ತುತಪಡಿಸಿದರು. ಕೊನೆಯದಾಗಿ, ಸಂಸ್ಥೆಯನ್ನುಬೆಳೆಸುವಮುಂದಿನ ಕಾರ್ಯಕ್ರಮಗಳ ಕುರಿತು ಚರ್ಚಿಸಿದರು. ಭಾಗಿಯಾದ ಎಲ್ಲರಿಗೂ ಆ ದಿನವೊಂದು ಆಧ್ಯಾತ್ಮಿಕ ಹಬ್ಬವಾಗಿತ್ತು.

### ಹುಬ್ಬಳ್ಳಿ, ಕರ್ನಾಟಕ

ಉತ್ತರ ಕರ್ನಾಟಕ ಭಾಗದ ವಿವಿಧ ಕೇಂದ್ರಗಳಿಂದ ಬಂದ 42 ಯುವ ಸಾಧಕರಿಗಾಗಿ, ಮಾರ್ಚ್ 13, 14ರಂದು ಒಂದು ವಿಚಾರಗೋಷ್ಠಿಯನ್ನು ಆಯೋಜಿಸಲಾಗಿತ್ತು. ಈ ಗೋಷ್ಠಿಯನ್ನು ಆಯೋಜಿಸಲು ಮತ್ತು ಯುವಕರನ್ನು ಉತ್ತೇಜಿಸಲು ಹುಬ್ಬಳ್ಳಿಯ ಯುವ ಘಟಕ ಒಂದು ತಿಂಗಳಿನಿಂದ ಅವಿರತವಾಗಿ ಕೆಲಸ ಮಾಡಿತ್ತು. ಜೀವನದ ಗುರಿ, ಆಧ್ಯಾತ್ಮಿಕ ಪಯಣ, ಸಾಧನ ಮತ್ತು ಪರಿವರ್ತನೆ ಕುರಿತು ತಮ್ಮೊಳಗೆ ಪ್ರತಿಸ್ಪಂದನ ಸಭೆಮಾಡುವುದರಿಂದ, ಅಂತರ್ಮುಖಿಯಾಗಲು ಮತ್ತು ಅಭಿವ್ಯಕ್ತ ಪಡಿಸಲು ಬಹಳ ಅನುಕೂಲವಾಯಿತು. ಇದರ ಅಂಗವಾಗಿ ಬೆಳಗ್ಗಿನ ವ್ಯಾಯಾಮ, ಸತ್ಸಂಗ, ದಿವ್ಯಮೌನ, ಆಟಗಳು, ವನಭೋಜನ ಮತ್ತು ಸಾಯಂಕಾಲದ ಶುದ್ಧೀಕರಣ ಕ್ರಮವನ್ನು ಕೂಡ ಸೇರಿಸಲಾಗಿತ್ತು.



## ಬೇಸಿಗೆ ಶಿಬಿರ, ಘಾಜಿಯಾಬಾದ್ (ಉ.ಪ್ರ)

ಮಕ್ಕಳಿಗಾಗಿ ಏಪ್ರಿಲ್ 11, 12ರಂದು ಶಾಂತಿಕುಂಜ ಆಶ್ರಮದಲ್ಲಿ ಒಂದು ಶಿಬಿರವನ್ನು ಆಯೋಜಿಸಲಾಗಿತ್ತು. ನೋಯಿಡಾ, ವೈಶಾಲಿ ಆಶ್ರಮ ಮತ್ತು ಘಾಜಿಯಾಬಾದ್‌ನಿಂದ ಭಾಗಿಯಾದ ಎಲ್ಲಾ ಮಕ್ಕಳಿಗೂ ಒಂದೊಂದು ಸ್ವಾಗತ ಉಪಕರಣವನ್ನು ಕೊಡಲಾಯಿತು.

ಶಿಬಿರದ ವಿಷಯ "ಇಂದ್ರ ಧನಸ್ಸು" ಆಗಿತ್ತು. ಸುಂದರವಾಗಿ ಸಜ್ಜುಗೊಂಡ ಆಶ್ರಮ ಆವರಣವು, ವಿವಿಧ ಬಣ್ಣಗಳಿಂದ ಅಲಂಕೃತಗೊಂಡಿತ್ತು. ಶಿಬಿರ ಏರೋಬಿಕ್ಸ್‌ನಿಂದ ಪ್ರಾರಂಭವಾಯಿತು. ಉಪಹಾರ ಮಾಡುವ ಸಮಯವಂತೂ ಪರಸ್ಪರ ಪ್ರೀತಿಯ ವಿನಿಮಯ, ಆರೈಕೆ ಮತ್ತು ಕಥೆ ಹೇಳುವುದರಿಂದ ಕೂಡಿತ್ತು. ಇದರ ನಂತರ, ಬಳಸಿದ ವಸ್ತುಗಳನ್ನು ಮರು ಉಪಯೋಗಿಸುವ ಕಲೆ ಮತ್ತು ಕರಕುಶಲ ಎಂಬ ಕಾರ್ಯಗಾರವಿತ್ತು. ಚಲನಚಿತ್ರ ಪ್ರದರ್ಶನ ಮತ್ತು ಬೊಂಬೆ ಪ್ರದರ್ಶನ ನಂತರ ಮಧ್ಯಾಹ್ನದ ಭೋಜನವಾಯಿತು. ಸಾಯಂಕಾಲದ ಸಮಯವನ್ನು ಆಶ್ರಮವನ್ನು ಸ್ವಚ್ಛಗೊಳಿಸುವ, ಧ್ಯಾನ ಮಂದಿರದಲ್ಲಿ ಕುರ್ಚಿಗಳನ್ನು ತೊಳೆಯುವ ಮತ್ತು ಗಿಡಗಂಟೆಗಳಿಗೆ ನೀರುಣಿಸುವ ಕೆಲಸಗಳಲ್ಲಿ ತೊಡಗಿಸಲಾಯಿತು. ಮಕ್ಕಳೆಲ್ಲರೂ ಅತ್ಯದ್ಭುತವಾದ ಕಾರ್ಯದಕ್ಷತೆಯ ಶೈಲಿಯನ್ನು ಪ್ರದರ್ಶಿಸುತ್ತ ಅಮಿತವಾದ ಆನಂದವನ್ನು ಪಡೆದರು.

ಸ್ವಯಂ ಸೇವಕರು, ಫುಟ್‌ಬಾಲ್, ಕ್ರಿಕೆಟ್ ಮತ್ತು ಹಗ್ಗಜಗ್ಗಾಟ ಅಂತಹ ಹೊರಾಂಗಣ ಆಟಗಳನ್ನು ಆಯೋಜಿಸಿದರು. ಸಂಜೆ ಹೊತ್ತಿನಲ್ಲಿ ಮಕ್ಕಳು ಮೂಕಸೋಗು ಮತ್ತು ಏರೋಬಿಕ್ಸ್‌ನ್ನು ಆನಂದಿಸಿದರು. ಅಂದಿನ ದಿನವನ್ನು ತಮ್ಮ ದಿನಚರಿ ಬರೆಯುವ ಮತ್ತು ರಾತ್ರಿಯ ಪ್ರಾರ್ಥನೆಯೊಂದಿಗೆ ಮುಕ್ತಾಯಗೊಳಿಸಿದರು.



ಮರುದಿನ ಏರೊಬಿಕ್ಸ್ ನಂತರ ಉಪಹಾರವಾಯಿತು. ಸಾಧಕರೆಲ್ಲರೂ ರವಿವಾರದ ಸತ್ಸಂಗದ ನಿಮಿತ್ತ ಪೂಜಾ ಮಂದಿರದ ಕಡೆಗೆ ಹೊರಟಾಗ, ಮಕ್ಕಳೆಲ್ಲರೂ ತಮ್ಮ ಕೇಂದ್ರವನ್ನು ಶೃಂಗರಿಸುವ ಮತ್ತು ಆಟವಾಡುವುದರಲ್ಲಿ ನಿರತರಾದರು. ಪರಸ್ಪರ ಸಹಕಾರ, ಸಹಬಾಳ್ವೆ, ನಿಸರ್ಗ ಪ್ರೇಮ, ಭಕ್ತಿ, ಕಠಿಣ ಶ್ರಮ, ಐಕ್ಯತೆ, ಸಾಂಘಿಕ ಭಾವನೆ, ಕಾರುಣ್ಯ ಮತ್ತು ಧಾರಾಳತನ ಇತ್ಯಾದಿ ವಿಷಯಗಳ ಕುರಿತು ಪರಾಮರ್ಶಿಸಿದಲ್ಲದೆ ಸಮ್ಮತಿಸಿದರು. ಮುಂದಿನ ಬೇಸಿಗೆ ಶಿಬಿರದ ಆಗಮನದ ಆಶೆಯಲ್ಲಿ ಎಲ್ಲರೂ ತಮ್ಮ ಮನೆಗೆ ಹೊರಟರು.

## ಚುಟುಕು ವಾರ್ತೆಗಳು



### ಕೋಯಿಮತ್ತೂರು, ತಮಿಳುನಾಡು

ಇಲ್ಲಿಯ ವಿಮಾನ ನಿಲ್ದಾಣದ ಹತ್ತಿರ ವಾಸವಾಗಿರುವ ಸುಮಾರು 40 ಅಭ್ಯಾಸಿಗಳ ಅನುಕೂಲಕ್ಕಾಗಿ ಒಂದು ಹೊಸ ಉಪಕೇಂದ್ರವನ್ನು ವಿಮಾನ ನಿಲ್ದಾಣದ ಹತ್ತಿರ ಉದ್ಘಾಟಿಸಲಾಯಿತು. ಬೆಳಿಗ್ಗಿನ 7–30ರ ಸತ್ಸಂಗವನ್ನು ಸಹೋದರ ಟಿ.ವಿ.ವಿ.ರಾವ್, ವಿಭಾಗೀಯ ನಿರ್ವಾಹಕರಿಂದ ನೆರವೇರಿಸಲಾಯಿತು. ಮೊದಲಿದ್ದ 80 ಅಭ್ಯಾಸಿಗಳಲ್ಲದೇ 10 ಹೊಸ ಅಭ್ಯಾಸಿಗಳು ಸತ್ಸಂಗದಲ್ಲಿ ಭಾಗವಹಿಸಿದರು. ಇದರ ನಂತರ ಪ್ರಶ್ನೋತ್ತರ ಸಭೆಯಲ್ಲಿ ಕೋಯಿಮತ್ತೂರಿನ ಕೇಂದ್ರದ ಮೇಲ್ವಿಚಾರಕ ಸಹೋದರ ಟಿ.ಎಸ್. ಮಣಿಯನ್ ಮತ್ತು ವಿಭಾಗೀಯ ನಿರ್ವಾಹಕ ಕೇಳುಗರು ಎತ್ತಿದ ಪ್ರಶ್ನೆಗಳಿಗೆ ಉತ್ತರಿಸಿದರು. ಈ ಅನುಭವ ಮೆಲುಕುವ ಸಭೆಯ ನಂತರ, ಮಗದೊಮ್ಮೆಯ ಸತ್ಸಂಗ ಮತ್ತು ಭೋಜನದೊಂದಿಗೆ ಮುಕ್ತಾಯವಾಯಿತು.



### ಭಿಲವಾಡಾ, ರಾಜಸ್ಥಾನ

"ಜೀವನದ ಜೊತೆ ಓಟ" ಎಂಬವಿಷಯದ ಕುರಿತು ಒಂದುಸಾಕ್ಷ್ಯ ಚಿತ್ರವನ್ನುಮಾರ್ಚ್ 8, 2015ರ ಸತ್ಸಂಗದ ನಂತರ ಪ್ರದರ್ಶಿಸಲಾಯಿತು. ಇದಕ್ಕೆಸತ್ಸಂಗಿಗಳ ಬಂಧು–ಮಿತ್ರರೆಲ್ಲರೂ ಆಗಮಿಸಿದ್ದರು. ಭಾಗವಹಿಸಿರುವವರೆಲ್ಲರಿಗೂ, ಜೀವನದ ಕುರಿತ ಹತ್ತು ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲಲು ಹೇಳಲಾಯಿತು. ಇದೊಂದು ಪಯಣವೋ ಅಥವಾ ನಾಗಾಲೋಟವೂ? ಒಂದು ವೇಳೆ ಓಟವಾದರೆ ಯಾತಕ್ಕಾಗಿ ಈ ಓಟ? ನಾವೆಲ್ಲರೂ ಒಂದೇ ದಿಕ್ಕಿನಲ್ಲಿ ಓಡುತ್ತಿದ್ದೇವೆಯೇ? ನಮ್ಮ ದಿಕ್ಕನ್ನು ಗುರುತಿಸಲು ಒಂದು ಸಲ ಯಾಕಾದರೂ ಯೋಚಿಸಬಾರದು? ಪಾರಸ್ಪರಿಕ ಸಂಭಾಷಣೆಯಲ್ಲಿ ತಮಗೆ ಅತಿಯಾಗಿ ಹಿಡಿಸಿದ ಪ್ರಶ್ನೆ ಯಾವುದೆಂದು ತಿಳಿಸಲು ಕೇಳಲಾಯಿತು. ಕೊನೆಯಲ್ಲಿ ತಮ್ಮ ಅನಿಸಿಕೆಗಳನ್ನು ಕ್ರೋಢೀಕರಿಸಲು ನೋಂದಾಯಿಸಲು ಹೇಳಲಾಯಿತು. ಎಲ್ಲರೂ ಕಾರ್ಯಕ್ರಮವನ್ನು ಮೆಚ್ಚುತ್ತ ಮುಂದಿನ ದಾರ್ಶನಿಕವನ್ನು ಆದಷ್ಟೂ ಕೂಡಲೇ ಆಯೋಜಿಸಬೇಕೆಂದು ಬಯಸಿದರು. ಭಾಗವಹಿಸಿದವರ ಜೀವನದಲ್ಲಿ ಒಂದು ಬದಲಾವಣೆಯ ಚಾಲನೆಯನ್ನು ತರುವಲ್ಲಿ ಈ ಕಾರ್ಯಾಗಾರ ಸಹಾಯಕಾರಿಯಾಗಿದೆ ಎಂದು ನಂಬಲಾಗಿದೆ.

### ಮಂಗಳೂರು, ಕರ್ನಾಟಕ



"ಭಕ್ತಿಯನ್ನುಬೆಳೆಸುವಬಗೆಹೇಗೆ" ಕುರಿತುಬೆಂಗಳೂರಿನ ಕ್ರೆಸ್ಟ್ ನಿರ್ದೇಶಕರಾದ ಸಹೋದರ ಮೋಹನ್‌ದಾಸ್ ಪೈ ಅವರು ಫೆಬ್ರವರಿ 22 ರಂದು ಒಂದು ಕಾರ್ಯಾಗಾರವನ್ನು ಆಯೋಜಿಸಿದ್ದರು. ಸುತ್ತಮುತ್ತಲಿನ ಕೇಂದ್ರಗಳಿಂದ ಬಂದ ಮತ್ತು ಮಂಗಳೂರು ಕೇಂದ್ರದ 9 ಸಾಧಕರು ಇದರಲ್ಲಿ ಭಾಗವಹಿಸಿದ್ದರು. ತ್ವರಿತ ಆಧ್ಯಾತ್ಮಿಕ ಪ್ರಗತಿ ಮತ್ತು ಗುರುಗಳಲ್ಲಿ ಭಕ್ತಿಯ ಮಹತ್ವ ಕುರಿತು ಅವರು ವಿವರಿಸಿದರು. ಇಂತಹ ಭಕ್ತಿಯನ್ನು ಬೆಳೆಸುವ ಬಗೆ, ಆ ದೆಶೆಯಲ್ಲಿ ಎದುರಾಗುವ ಅಡೆತಡೆಗಳ ಕುರಿತು ತಮ್ಮ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಸಾಧಕರಿಗೆ ತಿಳಿಸಲಾಯಿತು.

ಇದೇ ವಿಷಯ ಕುರಿತು ಭೋಜನದ ನಂತರ ಒಂದು ನಿಷ್ಕರ್ಷೆಯನ್ನು ಮಾಡಲಾಯಿತು. ಈ ಮೊದಲು ಪರಾಮರ್ಶಿಸಿದ 3–4 ಸಲಹೆಗಳನ್ನು ಗಂಭೀರವಾಗಿ ಪಾಲಿಸಿದಲ್ಲಿ, ಅಭ್ಯಾಸಿಗಳು ತೀವ್ರಗತಿಯಲ್ಲಿ ಪ್ರಗತಿ ಸಾದಿಸುತ್ತಾರೆಂದು ತಮ್ಮ ಸಮಾರೋಪ ಭಾಷಣದಲ್ಲಿ ಪೈಯವರು ಹೇಳಿದರು. ಪ್ರಶ್ನೋತ್ತರ ಸಭೆಯು ಕೆಲವು ವಿವರಣೆಗಳನ್ನು ನೀಡಿತು. ಭಕ್ತಿಯನ್ನು ವೃದ್ಧಿಸಲು ವೈಯುಕ್ತಿಕವಾಗಿ ತಮ್ಮೊಳಗೆ 10 ನಿಮಿಷ ಇಣುಕಿ ನೋಡಿಕೊಂಡು ತಾವೇನು ಮಾಡಬೇಕೆಂದು ನಿರ್ಧರಿಸಲು ಸೂಚಿಸಲಾಯಿತು. ತದನಂತರ ಪ್ರತಿಯೊಬ್ಬರು ತಮ್ಮ ಅನಿಸಿಕೆಗಳನ್ನು ಇತರರೊಂದಿಗೆ ಹಂಚಿಕೊಂಡರು. ಸಾಯಂಕಾಲ 4 ಘಂಟೆಯ ಸತ್ಸಂಗದೊಂದಿಗೆ ಕಾರ್ಯಾಗಾರ ಮುಕ್ತಾಯವಾಯಿತು.

To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2015 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.